ಏಪ್ರಿಲ್-ಜೂನ್-2022

ಸಂಪುಟ : 4 ಸಂಚಿಕೆ : 2

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

April-June 2022

# KRUSHI VANA

*Quarterly news letter*














UAS, BANGALORE





## ಸುಭಾಷಿತ

We learned that economic growth and environmental protection can and should go hand in hand.

**- christopher Dodd**

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

**Volume: 4 Issue: 2**

**ಸಂಪುಟ: 4 ಸಂಚಿಕೆ: 2**

## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಡಾ. ಎಸ್.ಸಿ.ವಿ. ರೆಡ್ಡಿ, ನಿರ್ದೇಶಕರು, ಕೆ.ಎಸ್.ಎಸ್.ಸಿ.ಎ(ನಿ)

**ಸಂಪಾದಕರು**

ಶ್ರೀ ಅಜಯ್ ಮಿಶ್ರ, ಭಾ.ಅ.ಸೇ(ನಿ)

**ಸಹ ಸಂಪಾದಕರು**

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ(ನಿ)

ಶ್ರೀ ಎ. ಅಶ್ವಥಯ್ಯ, ಉ.ಅ.ಸಂ(ನಿ)

ಡಾ. ಎ.ಬಿ. ಪಾಟೀಲ, ರಜಿಸ್ಟ್ರಾರ್(ನಿ)

ಶ್ರೀ ಎನ್. ಶಿವರಾಜು, ಉ.ಅ.ಸಂ(ನಿ)

ಶ್ರೀ ಆರ್. ಆಂಜನೇಯರೆಡ್ಡಿ, ಪ್ರಗತಿಪರ ರೈತರು

ಶ್ರೀ ಮಲ್ಲೇಶ್ ಲಿಂಗಾಚಾರ್, ತಂತ್ರಜ್ಞರು

## ಕಚೇರಿ ವಿಳಾಸ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126
Email: iaftbangalore@gmail.com
www.iaft.co.in

## ಮನವಿ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in)ದಲ್ಲಿರುವ ಅರ್ಜಿ ನಮೂನೆಯ ಪ್ರತಿಯನ್ನು ಪಡೆದು ಸದಸ್ಯತ್ವ ಶುಲ್ಕವನ್ನು IAFTಯ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/ NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಹೆಚ್.ಜಿ. ಶಿವಾನಂದಮೂರ್ತಿ**
ಕಾರ್ಯದರ್ಶಿ

## ಪರಿವಿಡಿ

| | ಲೇಖನ | ಪುಟ |
|---|---|---|
| 1 | ಸಂಪಾದಕೀಯ | 04 |
| 2 | ರೈತರ ಜಮೀನುಗಳಲ್ಲಿನ ಅಂದರೆ ಸಾಂಪ್ರದಾಯಿಕ ಅರಣ್ಯಗಳ ಹೊರಗಡೆ ಶ್ರೀಗಂಧದ ಸುವಾಸನೆಯುಕ್ತ ಮರಗಳ ಬೆಳವಣಿಗೆ | 05 |
| 3 | ಶ್ರೀಗಂಧದಮರದ ಇತಿಹಾಸ – ಡಾ. ಫ್ರಾನ್ಸಿಸ್ ಬುಕನಾನ್‌ರವರು ವರ್ಣಿಸಿರುವಂತೆ | 06 |
| 3 | ಅರಣ್ಯ ಕೃಷಿಯ ವಿಶಿಷ್ಟ ಸಾಧಕ: ನಿವೃತ್ತ ಅಧಿಕಾರಿ ಸಿ.ಬಿ. ಪಾಟೀಲ | 07 |
| 4 | ಸಾಗುವಾನಿ ಮರಗಳನ್ನು ಬೆಳೆದ ರೈತನ ಯಶೋಗಾಥೆ | 08 |
| 5 | ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಸನ್ಮಾನ್ಯ ಶ್ರೀ ಗೋಪಾಲಗೌಡ ಅವರೊಂದಿಗೆ | 09 |
| 6 | ಕೃಷಿಅರಣ್ಯ ಪ್ರಾಥಮಿಕ ಮಾಹಿತಿ | 12 |

## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ. ಜಾಹೀರಾತು ನೀಡಲು ಕೋರಿದೆ.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |

Publisher: IAFT, Editor (ಸಂಪಾದಕರು): Ajay Misra, IFS (Retd), KRUSHI VANA, Quarterly News Letter, April-June-2022
Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bangalore-560019

ಸಂಪಾದಕೀಯ...

# ಕೃಷಿಅರಣ್ಯದಲ್ಲಿ ಬೆಳೆದ ಮರಗಳ ಉತ್ಪನ್ನಗಳಿಗೆ ಜಿ.ಎಸ್.ಟಿ.ಯಿಂದ ಮುಕ್ತಗೊಳಿಸಲು ಸರ್ಕಾರಕ್ಕೆ ಮನವಿ



ಶ್ರೀ ಅಜಯ್ ಮಿಶ್ರ, ಭಾ.ಅ.ಸೇ (ನಿ)

**ಸಂಪಾದಕರು**

ಕೃಷಿಅರಣ್ಯಗಳು ರೈತರ ಆದಾಯವನ್ನು ಹೆಚ್ಚಿಸಲು ವಿಫುಲ ಅವಕಾಶಗಳನ್ನು ಹೊಂದಿದ್ದು, ರೈತರ ಆದಾಯವನ್ನು ಹೆಚ್ಚಿಸುವುದಷ್ಟೇ ಅಲ್ಲದೆ ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಲು, ಪರಿಸರ ಸಮತೋಲನ ಕಾಯ್ದುಕೊಂಡು, ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ಹಾಗೂ ಪರಿಸರದಲ್ಲಿ ಸುಸ್ಥಿರತೆಯನ್ನು ಉಂಟು ಮಾಡುವಲ್ಲಿ ಕೃಷಿಅರಣ್ಯಗಳ ಪಾತ್ರ ಬಹಳ ದೊಡ್ಡದಾಗಿದೆ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೂಚಿಸಿರುವಂತೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಸಹಕಾರಿಯಾಗಿದೆ. ಕೃಷಿಅರಣ್ಯಗಳನ್ನು ಬೆಳೆಸುವುದರಿಂದ ಮಳೆಯ ನೀರಿನ ವೇಗವನ್ನು ನಿಯಂತ್ರಿಸಿ ಮಣ್ಣಿನ ಸವಕಳಿಯನ್ನು ತಡೆದು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲಿವೆ ಹಾಗೂ ಅಂತರ್ಜಲದ ಮಟ್ಟವನ್ನು ಮಳೆಯ ನೀರನ್ನು ಸ್ಥಳದಲ್ಲಿಯೇ ಇಂಗುವಂತೆ ಮಾಡುವುದರಿಂದ, ಜಲ ಮರಪೂರಣಕ್ಕೆ ಸಹಕಾರಿಯಾಗಿದ್ದು, ಅಂತರ್ಜಲದ ಮಟ್ಟವನ್ನೂ ಏರಿಸುತ್ತವೆ.

ಭಾರತದ ಅರಣ್ಯ ಪರಿಸ್ಥಿತಿಯ ವರದಿ (ISFR) 2021ರ ಪ್ರಕಾರ, ಅರಣ್ಯ ಮತ್ತು ಮರಗಳ ಹೊದಿಕೆಯು ಸಾಂಪ್ರದಾಯಿಕ ಅರಣ್ಯಗಳ ಹೊರಗಡೆ ರಾಷ್ಟ್ರದಲ್ಲಿ ಕಣ್ಣಿಗೆ ಕಾಣುವಷ್ಟರ ಮಟ್ಟಿಗೆ ಹೆಚ್ಚಿಗೆಯಾಗಿರುವುದರ ಬಗ್ಗೆ ಪ್ರಕಟಿಸಿರುತ್ತದೆ. 2019 ಮತ್ತು 2021ರ ISFR ವರದಿಯ ಮಧ್ಯದ ಅವಧಿಯಲ್ಲಿ ರಾಷ್ಟ್ರದಲ್ಲಿ ದಾಖಲಿತ ಅರಣ್ಯಗಳ (RFA) ಒಳಗಡೆ ಅರಣ್ಯಗಳ ಹೊದಿಕೆಯು 31 ಚ.ಕಿ.ಮೀ ನಷ್ಟು ಹೆಚ್ಚಳವಾಗಿದ್ದು, ಸಾಂಪ್ರದಾಯಿಕ ಅರಣ್ಯಗಳ ಹೊರಗಡೆ ಮರಗಳ ಹೊದಿಕೆಯು 2230 ಚ.ಕ.ಮೀ ನಷ್ಟು ಹೆಚ್ಚಳವಾಗಿರುತ್ತದೆ. ಕರ್ನಾಟಕ ರಾಜ್ಯದ ಅರಣ್ಯದಲ್ಲಿಯೂ ಸಹ ಅರಣ್ಯಗಳ ಹೊರಗಡೆ ಮರಗಳ ಸಂಖ್ಯೆಯು ಅಥವಾ TOF (Tree outside Forest) ವಾರ್ಷಿಕವಾಗಿ 750 ಚ.ಕಿ.ಮೀ ಹೆಚ್ಚುವರಿಯಾಗಿರುತ್ತದೆ. ಕೃಷಿಅರಣ್ಯವು ರಾಷ್ಟ್ರದಲ್ಲಿ ಸಾಂಪ್ರದಾಯಿಕ ಅರಣ್ಯಗಳ ಹೊರಗಡೆ ಮರಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಬಹು ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದೆ. ರೈತರಲ್ಲಿ ಕೃಷಿಅರಣ್ಯವನ್ನು ಹೆಚ್ಚು ಪ್ರಚಾರ ಪಡಿಸಲು ಹಾಗೂ ಉತ್ತೇಜಿಸಲು ಕೃಷಿಅರಣ್ಯಗಳಿಂದ ಹೆಚ್ಚಿನ ಆರ್ಥಿಕ ಲಾಭವನ್ನು ಕೃಷಿಅರಣ್ಯಗಳ ಉತ್ಪನ್ನಗಳಿಂದ ದೊರೆಯುವಂತೆ ಅವಕಾಶಗಳನ್ನು ಕಲ್ಪಿಸುವುದು, ಅದರಲ್ಲೂ ಮುಖ್ಯವಾಗಿ ಮರಮುಟ್ಟುಗಳಿಂದ (ಟಿಂಬರ್) ಹೆಚ್ಚಿನ ಆದಾಯ ದೊರೆಯುವಂತೆ ಕ್ರಮ ತೆಗೆದುಕೊಳ್ಳುವುದು ಇಂದಿನ ಅವಶ್ಯಕತೆಗಳಲ್ಲೊಂದಾಗಿದೆ.

ಅಸ್ತಿತ್ವದಲ್ಲಿರುವ ಸರಕು ಮತ್ತು ಸೇವಾ ತೆರಿಗೆ (GST) ಕಾನೂನಿನಡಿ ಮರದ ದಿಮ್ಮಿಗಳಿಗೆ ಕೃಷಿಅರಣ್ಯದಲ್ಲಿ ರೈತರು ಬೆಳೆದಿರುವ ಮರಗಳನ್ನು ಕಡಿದು ಮಾರಾಟ ಮಾಡುವಾಗ ಈಗಿರುವ ತೆರಿಗೆ ಈ ಕೆಳಗಿನಂತಿದೆ.

"ಯಾವುದೇ ಜಾತಿಯ ಮರದ ದಿಮ್ಮಿಗಳು (ರೌಂಡ್ ಲಾಗ್ಸ್) / ಚೌಬೀನೆ (ಮರಮುಟ್ಟು), ಪಲ್ಪ್‌ಗಾಗಿ ಉಪಯೋಗಿಸುವ ಮರದ ಉತ್ಪನ್ನಗಳೂ ಸೇರಿದಂತೆ ಕೋಡ್ ಹೆಚ್.ಎಸ್. ಎನ್ 4403 ರಂತೆ ಶೇ.18 ರಷ್ಟು ಜಿಎಸ್‌ಟಿ ವಿಧಿಸಲಾಗಿದೆ".

ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಯಾವುದೇ ಕೃಷಿ ಉತ್ಪನ್ನಗಳಿಗೆ, ತೋಟಗಾರಿಕಾ ಹಾಗೂ ಪುಷ್ಪ ಉತ್ಪನ್ನ ಮುಂತಾದವುಗಳಿಗೆ ಯಾವುದೇ ರೀತಿಯ ಜಿ.ಎಸ್.ಟಿ. ಅನ್ವಯವಾಗುವುದಿಲ್ಲ. ಕೃಷಿ, ತೋಟಗಾರಿಕೆ ಮತ್ತು ಪುಷ್ಪ ಕೃಷಿಯಂತೆ ಕೃಷಿಅರಣ್ಯವು ಸಹ ಸಮಗ್ರ ಕೃಷಿ ಪದ್ಧತಿಯ ಭಾಗವಾಗಿರುತ್ತದೆ. ಕೃಷಿಅರಣ್ಯವು ಸಹ ಇದೊಂದು ರೀತಿಯ ಕೃಷಿಯೇ ಆಗಿರುತ್ತದೆ ಹಾಗೂ ಇದನ್ನು ಸಹ ಇತರೆ ಕೃಷಿ ಪದ್ಧತಿಗಳಾದ ಕೃಷಿ, ತೋಟಗಾರಿಕೆ, ಪುಷ್ಪಗಳನ್ನು ಬೆಳೆಯುವಂತೆ ರೈತರೇ ತಮ್ಮ ಜಮೀನುಗಳಲ್ಲಿ ಸಮಗ್ರ ಕೃಷಿ ಪದ್ಧತಿಯಂತೆ ಸುಸ್ಥಿರ ಕೃಷಿಗಾಗಿ ಹಾಗೂ ಆದಾಯವನ್ನು ಸುಸ್ಥಿರ ರೀತಿಯಲ್ಲಿ ಹೆಚ್ಚಿಸಿಕೊಳ್ಳುವುದಾಗಿರುತ್ತದೆ. ಆದರೆ ಮಾರುಕಟ್ಟೆ ಸೃಷ್ಟಿಸಿರುವ ಬೇಡಿಕೆ ಮತ್ತು ಪೂರೈಕೆ ಸಮಸ್ಯೆಗಳಿಂದ ರೈತರು ಬೆಳೆದಂತಹ ಮರದ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರೆಯುತ್ತಿಲ್ಲ. ಇದರ ಜೊತೆಗೆ ರೈತರು ಮರಗಳನ್ನು ಕಡಿದು ಮಾರಾಟ ಮಾಡುವ ಸಂದರ್ಭದಲ್ಲಿ ಭರಿಸಬೇಕಾಗಿರುವ ಜಿಎಸ್‌ಟಿ ಯಿಂದಾಗಿ ರೈತರಿಗೆ ಮಾರಾಟ ಮಾಡುವ ಬೆಲೆಯು ಕಡಿಮೆಯಾಗುತ್ತಿದೆ. ಇದರಿಂದ ರೈತರಿಗೆ ದೊರೆಯುವ ಆದಾಯವು ಸಹ ತುಂಬಾ ಕಡಿಮೆಯಾಗುತ್ತಿದೆ. ಕೃಷಿಅರಣ್ಯವನ್ನು ಹೆಚ್ಚಾಗಿ ಮಧ್ಯಮ, ಸಣ್ಣ ಮತ್ತು ಅತೀ ಸಣ್ಣ ರೈತರುಗಳು ಕೃಷಿ ಹಾಗೂ ತೋಟಗಾರಿಕೆ ಬೆಳೆಗಳೊಂದಿಗೆ, ಅವರಿಗಿರುವ ಕಡಿಮೆ ಭೂಮಿಯಲ್ಲಿ ಬೆಳೆಯುತ್ತಿದ್ದು, ಇದರಿಂದ ಹೆಚ್ಚುವರಿ ಆದಾಯವನ್ನು ಬರಗಾಲ, ಮಹಾಪೂರ ಅಥವಾ ಇನ್ನಿತರೆ ಒತ್ತಡಗಳಲ್ಲಿ ನಿರೀಕ್ಷಿಸುತ್ತಾರೆ.

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯಲ್ಲಿ ಅನೇಕ ರೈತರುಗಳು ಸದಸ್ಯರುಗಳಿದ್ದು, ರೈತರು ಬೆಳೆದಂತಹ ಕೃಷಿಅರಣ್ಯದ ಉತ್ಪನ್ನಗಳಾದ ಮರಮುಟ್ಟು, ಪೋಲ್ಸ್, ಉರುವಲು ಕಟ್ಟಿಗೆ ಮುಂತಾದವುಗಳಿಗೆ ವಿಧಿಸುತ್ತಿರುವ ಜಿಎಸ್‌ಟಿಯಿಂದ ವಿನಾಯಿತಿ ನೀಡಲು ಪ್ರಾರ್ಥಿಸುತ್ತಿದ್ದಾರೆ. ಸಂಸ್ಥೆಯ ಪದಾಧಿಕಾರಿಗಳು ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಪದೇಪದೇ ಜಿಎಸ್‌ಟಿ ವಿನಾಯಿತಿಗಾಗಿ ಸಂಬಂಧಿಸಿದ ಸರ್ಕಾರದ ಪ್ರಾಧಿಕಾರದ ಜೊತೆ ಈ ವಿಚಾರವಾಗಿ ಸೂಕ್ತ ಪರಿಹಾರಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಕೃಷಿಅರಣ್ಯದಲ್ಲಿ ಬೆಳೆದಿರುವ ಮರಗಳನ್ನು ಪೀಠೋಪಕರಣಗಳ ತಯಾರಿಕೆಗೆ, ಪ್ಲೈವುಡ್, ವಿನೀರ್ ಪ್ಯಾನೇಲ್ ಬೋರ್ಡ್, ಪಾರ್ಟಿಕಲ್ ಬೋರ್ಡ್, ವೇಪರ್ ಬೋರ್ಡ್, ಫೈಬರ್‌ವುಡ್, ಲ್ಯಾಮಿನೇಟೆಡ್‌ವುಡ್ ಮುಂತಾದವುಗಳಿಗೆ ಶೇ.12 ರಿಂದ 28 ರವರೆಗೆ ಜಿಎಸ್‌ಟಿ ಯನ್ನು ವಿಧಿಸಲಾಗುತ್ತಿದೆ. ಆದುದರಿಂದ ಕೃಷಿಅರಣ್ಯವನ್ನು ಉತ್ತೇಜಿಸುವುದರಿಂದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳ ಪೂರೈಸುವುದರಿಂದ ಕೈಗಾರಿಕೆಗಳ ಚಟುವಟಿಕೆಯನ್ನು ಹೆಚ್ಚಿಸಲು ಸಹಕಾರಿಯಾಗಲಿದೆ. ತನ್ಮೂಲಕ ಸರ್ಕಾರಕ್ಕೆ ಹೆಚ್ಚಿನ ಜಿಎಸ್‌ಟಿ ದೊರೆಯಲಿದೆ.

ಮೇಲಿನ ಎಲ್ಲಾ ಅಂಶಗಳಾದ ಅರಣ್ಯ ಸಂರಕ್ಷಣೆ, ಪರಿಸರ, ವಾತಾವರಣದಲ್ಲಿ ಹೆಚ್ಚುತ್ತಿರುವ ಜಾಗತಿಕ ಉಷ್ಣತೆಯ ನಿಯಂತ್ರಣ, ಹವಾಮಾನ ವೈಪರೀತ್ಯಗಳಿಂದ ಹೆಚ್ಚು ಭದ್ರತೆಯನ್ನು ಒದಗಿಸಲು ಸಹಕಾರಿಯಾದ ಕೃಷಿಅರಣ್ಯದ ಉತ್ಪನ್ನಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಬೇಕಾಗಿದೆ. ಆದುದರಿಂದ ಕೃಷಿಅರಣ್ಯಗಳಿಂದ ದೊರೆಯುವ ಯಾವುದೇ ತರಹದ ಮರದ ಉತ್ಪನ್ನಗಳನ್ನು ಜಿಎಸ್‌ಟಿಯಿಂದ ಹೊರಗಿಡುವುದು ಸೂಕ್ತವಾಗಿದೆ.

## ಕೃಷಿಅರಣ್ಯ ಸಂಸ್ಥೆಯ ಸದಸ್ಯತ್ವ

| ಸದಸ್ಯತ್ವದ ವಿವರ | ಶುಲ್ಕ (ರೂ.) |
|---|---|
| ಸಂಸ್ಥಾ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಅಜೀವ ಸದಸ್ಯತ್ವ | 5,000.00 |
| ಸಹ ಸದಸ್ಯತ್ವ | 2,000.00 |

# ರೈತರ ಜಮೀನುಗಳಲ್ಲಿನ ಸಾಂಪ್ರದಾಯಿಕ ಅರಣ್ಯಗಳ ಹೊರಗಡೆ ಶ್ರೀಗಂಧದ ಸುವಾಸನೆಯುಕ್ತ ಮರಗಳ ಬೆಳವಣಿಗೆ

**ಅಜಯ್ ಮಿಶ್ರ**, ಭಾ.ಅ.ಸೇ (ನಿ), ಮೊ: 94498 63876 ಇಮೇಲ್: ajaimisra@rediffmail.com

ಶ್ರೀಗಂಧದ ಮರವು ಇಂದಿನ ದಿನಮಾನಗಳಲ್ಲಿ ಆರ್ಥಿಕವಾಗಿ ಹಣ ನೀಡುವಂತಹ ಮುಖ್ಯ ಮರಗಳಲ್ಲೊಂದಾಗಿದೆ. ಇದನ್ನು ರೈತರು ಅವರ ಜಮೀನುಗಳಲ್ಲಿ ಪೂರ್ಣಪ್ರಮಾಣದ ಬೆಳೆಯಾಗಿ ಅಥವಾ ಕೃಷಿ ಭೂಮಿಯ ಬದುಗಳು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಬೆಳೆಯಲು ಸೂಕ್ತವಾದ ಮರದ ಬೆಳೆಯಾಗಿದೆ. 1963ರ ಅರಣ್ಯ ಕಾಯ್ದೆಗೆ 2002 ರಲ್ಲಿ ತಿದ್ದುಪಡಿ ತಂದ ನಂತರ ನಿಧಾನವಾಗಿ ರೈತರಲ್ಲಿ ಭಯ ಹೋಗಿ, ಪ್ರಚಾರದಲ್ಲಿರುವ ಕೃಷಿ ಅರಣ್ಯದಲ್ಲಿ ಬೆಳೆಯಲು ಯೋಗ್ಯವಾದ ಮತ್ತು ಆರ್ಥಿಕವಾಗಿ ಲಾಭವನ್ನು ತರುವ ಮರವಾಗಿ ಪ್ರಸಿದ್ಧಿ ಪಡೆಯುತ್ತಿದೆ. ಇದನ್ನು ಬೆಳೆಯಲು ಸರ್ಕಾರದ ಯೋಜನೆಗಳಾದ ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿ (NMPB – National Medicinal plants board), ರಾಷ್ಟ್ರೀಯ ತೋಟಗಾರಿಕಾ ಮಿಶನ್ (National Horticulture Mission) ಮತ್ತು ಕೃಷಿಅರಣ್ಯ ಪ್ರೋತ್ಸಾಹ ಯೋಜನೆಗಳಲ್ಲಿ (KAPY) ಉತ್ತೇಜಿಸಲಾಗುತ್ತಿದೆ. ಇದುವರೆಗೂ ಶ್ರೀಗಂಧದ ಮರದ ಬೆಳವಣಿಗೆಯ ಬಗೆಗಿನ ದತ್ತಾಂಶವು ಅರಣ್ಯದಲ್ಲಿ ಬೆಳೆದಿರುವ ಮರಗಳಿಂದ ಪಡೆದಿರುವುದಾಗಿದೆ ಹಾಗೂ ಇದು ಮಳೆಯಾಶ್ರಿತದಲ್ಲಿ ಸ್ವಾಭಾವಿಕವಾಗಿ ಬೆಳೆದಿರುವುದಾಗಿದೆ. ಇದರ ಬೆಳವಣಿಗೆಯನ್ನು ಅಲ್ಲಿನ ಮಣ್ಣು, ಹವಾಗುಣ ಮತ್ತು ಸ್ವಾಭಾವಿಕ ಸನ್ನಿವೇಶಗಳು ಹಾಗೂ ತಳಿ ವಂಶವಾಹಿಯ ಗುಣಗಳು ಮತ್ತು ಅತಿಥಿ ಸಸ್ಯಗಳೊಂದಿಗಿನ ಬೆಳವಣಿಗೆಯಿಂದ ಶ್ರೀಗಂಧದ ಸುವಾಸನೆಯುಕ್ತ ಮರದ ಬೆಳವಣಿಗೆಯು ಅವಲಂಬಿತವಾಗಿರುತ್ತದೆ. ಈಗ ನಮಗೆ ಬೇಕಾಗಿರುವ ದತ್ತಾಂಶವೆಂದರೆ ಅದರ ಬೆಳವಣಿಗೆಯೊಂದಿಗೆ ವಿವಿಧ ಕೃಷಿ ವಲಯಗಳಲ್ಲಿ ಹಾಗೂ ಮಳೆಯಾಶ್ರಿತ ಮತ್ತು ನೀರಾವರಿಯ ಪ್ರದೇಶಗಳಲ್ಲಿ ಶ್ರೀಗಂಧದ ಮರದ ಬೆಳವಣಿಗೆಯೊಂದಿಗೆ ದೊರೆಯಬಹುದಾದ ಸುವಾಸನೆಯುಕ್ತ ಮರದ ಇಳುವರಿಯ ನಿಟ್ಟಿನಲ್ಲಿ ಬೇಕಾಗಿರುತ್ತದೆ. ಇದರ ಜೊತೆಗೆ ಇದರ ಮಾರುಕಟ್ಟೆ ಮತ್ತು ಮರ ಪರಿಷ್ಕರಿಸುವುದರಿಂದ ರೈತರಿಗೆ ದೊರೆಯುವ ಆದಾಯದ ಬಗೆಗಿನ ಮಾಹಿತಿಯು ಇದರ ಲಭ್ಯತೆಯಿಂದ ದೊರೆಯಬಹುದಾದ ಆದಾಯವನ್ನು ಉತ್ತಮಪಡಿಸಲು ಇರುವ ದಾರಿಯನ್ನು ತಿಳಿದುಕೊಳ್ಳಬಹುದು. ಇತ್ತೀಚೆಗೆ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಪದಾಧಿಕಾರಿಗಳು ಕರ್ನಾಟಕ ಸೋಪು ಮತ್ತು ಮಾರ್ಜಾಲ ಕಂಪನಿಗೆ ಭೇಟಿ ನೀಡಿ ಸಂಸ್ಥೆಯ ಮುಖ್ಯಸ್ಥರೊಂದಿಗೆ ಶ್ರೀಗಂಧದ ಪೂರೈಕೆ, ಲಭ್ಯತೆ ಮತ್ತು ಶ್ರೀಗಂಧದ ಎಣ್ಣೆಯ ಲಭ್ಯತೆ ಬಗ್ಗೆ ಸುಧೀರ್ಘವಾದ ಚರ್ಚೆ ನಡೆಸಿರುವರು. ಭಾರತದಲ್ಲಿ ಲಭ್ಯವಿರುವ ಶ್ರೀಗಂಧದ ಮರದಲ್ಲಿ ದೊರೆಯುವ ‘ಆಲ್ಫಾ’ ಮತ್ತು ‘ಬೀಟಾ’ ಸ್ಯಾಂಟಲಾಲ್ ಶೇ.90% ರಷ್ಟಿದ್ದು, ಆದರೆ ಆಸ್ಟ್ರೇಲಿಯಾದಲ್ಲಿನ ಸ್ಯಾಂಡಲ್‌ವುಡ್‌ನಲ್ಲಿ ಶೇ.52% ರಷ್ಟಿದೆ. ಆದರೆ ಭಾರತೀಯ ಶ್ರೀಗಂಧದ ಲಭ್ಯತೆ ಸಾಕಷ್ಟಿಲ್ಲದೆ ಇರುವುದು ಹಾಗೂ ಅತೀ ಹೆಚ್ಚಿನ ಬೆಲೆಯಿರುವುದರಿಂದ ಕೆ.ಎಸ್.ಡಿ.ಎಲ್. ಸಂಸ್ಥೆಯವರು ಶ್ರೀಗಂಧದ ಎಣ್ಣೆಯನ್ನು ಆಸ್ಟ್ರೇಲಿಯಾದಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ.

ಸಾಮಾನ್ಯವಾಗಿ 20 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಶ್ರೀಗಂಧದ ಮರಗಳು ಎದೆಯ ಎತ್ತರದಲ್ಲಿ 50 ಸೆಂ.ಮೀ ಗಿಂತ ಹೆಚ್ಚಾಗಿ ದಪ್ಪನಾಗಿರುವುದಿಲ್ಲ ಹಾಗೂ ರೈತರಿಗೆ ಆರ್ಥಿಕವಾಗಿ ಹೆಚ್ಚಿನ ಆದಾಯವನ್ನು ಸಹ ತರಲಾರವು. ಕೆ.ಎಸ್.ಡಿ.ಎಲ್. ಸಂಸ್ಥೆಯವರು ನೀಡಿರುವಂತ ಸಾಮಾನ್ಯ ದತ್ತಾಂಶದಲ್ಲಿ 2020–21ನೇ ಸಾಲಿನಲ್ಲಿ ಪೂರೈಕೆಯಾಗಿರುವ ಶ್ರೀಗಂಧದ ಮರದ ದಪ್ಪವು ಹೊರಗಿನ ತೊಗಟೆಯನ್ನು ಬಿಟ್ಟು ಸರಾಸರಿ 2.17 ಸೆಂ.ಮೀ. ನಿಂದ 3.90 ಸೆಂ.ಮೀ.ನಷ್ಟು ಮಾತ್ರ ಸುವಾಸನೆಯುಕ್ತ ಮರವಿರುವುದು. ಅಲ್ಲದೆ 18–25 ವರ್ಷಗಳ ಶ್ರೀಗಂಧದ ಮರಗಳಲ್ಲೂ ಸಹ ಕೆಲವು ಸಂದರ್ಭದಲ್ಲಿ ಹೆಚ್ಚಿನದಾಗಿ ಏನೂ ಉಪಯುಕ್ತವಾದ ಮರವಿರುವುದಿಲ್ಲ. 18–25 ವರ್ಷಗಳ ಶ್ರೀಗಂಧದ ಮರಗಳಿಂದ ಸರಾಸರಿ 4.70 ಕೆ.ಜಿ.ಯಿಂದ 7.00 ಕೆ.ಜಿ.ಯಷ್ಟು ಸುವಾಸನೆಯುಕ್ತ ಮರ ಲಭ್ಯವಿದೆ. ಇನ್ನೂ ಹಲವು ಮರಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸುವಾಸನೆಯುಕ್ತ ಮರ ದೊರೆಯುವುದು.

18 ರಿಂದ 25 ವರ್ಷಗಳ ಶ್ರೀಗಂಧದ ಮರಗಳಿಂದ ಪರಿಷ್ಕರಣೆಯ ನಂತರ ಅಂದರೆ ಕೆತ್ತನೆಯ ನಂತರ ದೊರೆಯುವ ಶ್ರೀಗಂಧದ ಮರದ ಪ್ರಮಾಣವು ಸಾಮಾನ್ಯವಾಗಿ ಸರಾಸರಿ ಶೇ.60 ರಿಂದ ಶೇ.70 ರಷ್ಟಿದ್ದು ಮತ್ತು ಚೇಗಿರುವ (ಸುವಾಸನೆಯುಕ್ತ) ಮರದ ಪ್ರಮಾಣವು ಶೇ.0.72 ರಿಂದ ಶೇ.10.14 ರಷ್ಟಿರುವುದಾಗಿ ವರದಿಸಲಾಗಿದೆ. ಇನ್ನೂ ಕೆಲವು ಪ್ರಕರಣಗಳಲ್ಲಿ ಪೂರೈಕೆ ಮಾಡಲಾದ ಶೇ.26.28 ರಲ್ಲಿ ಚೇಗಿರುವ ಸುವಾಸನೆಯುಕ್ತ ಮರವಿರುವುದಿಲ್ಲ ಹಾಗೂ ಇನ್ನೂ ಕೆಲವು ಮರಗಳಿಂದ ಹೃದಯ ಭಾಗವಿರುವ ಮರದ ಪ್ರಮಾಣವು ಶೇ.5.63 ರಿಂದ ಶೇ.31.17 ರಷ್ಟಿರುವುದಾಗಿ ತಿಳಿಸಿರುತ್ತಾರೆ. ಇದೇ ರೀತಿಯಲ್ಲಿ ಶ್ರೀಗಂಧದ ಮರಗಳ ಬಿಳಿ ಮರಕ್ಕೂ ಮತ್ತು ಹೃದಯ ಭಾಗದ ಮರದ ಪ್ರಮಾಣವು ಶೇ.43.8 ರಿಂದ ಶೇ.89.61 ರಷ್ಟಿರುವುದಾಗಿ ವರದಿಸಲಾಗಿದೆ. ಇದು ಸಾಮಾನ್ಯವಾಗಿ ಶ್ರೀಗಂಧದ ಮರಗಳಲ್ಲಿರುವ ಹೃದಯಭಾಗದ ಮರಕ್ಕೂ ಮತ್ತು ಇತರೆ ಬಿಳಿ ಮರದೊಂದಿಗಿರುವ ಮರದ ಪ್ರಮಾಣವಾಗಿರುತ್ತದೆ. ಇದಕ್ಕೂ ಮಿಗಿಲಾದ ಅಂದರೆ ತೊಗಟೆ ಹಾಗೂ ಇತರೆ ಮರದ ಭಾಗಗಳನ್ನು ವ್ಯರ್ಥವಾದ ಮರವೆಂದು ಪರಿಗಣಿಸಲಾಗುವುದು. ಶ್ರೀಗಂಧದ ಮರದ ಬೇರುಗಳನ್ನು ಪ್ರತ್ಯೇಕವಾಗಿ ತೂಕ ಮಾಡಲಾಗುವುದು ಹಾಗೂ ಶ್ರೀಗಂಧದ ಎಣ್ಣೆಯ ಪ್ರಮಾಣವು ಶೇ.3 ರಿಂದ ಶೇ.6 ರಷ್ಟಿರುವುದಾಗಿ ವರದಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ತುಲನಾತ್ಮಕವಾಗಿ ನೋಡಿದಾಗ ಬೇರೆ ಬೇರೆ ಸ್ಥಳಗಳಲ್ಲಿ ಅಂದರೆ ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ಬೆಳೆಯುತ್ತಿರುವ ಶ್ರೀಗಂಧವನ್ನು ಕಟಾವು ಮಾಡಿದಾಗ ವಿವಿಧ ಪ್ರಮಾಣದಲ್ಲಿ ಹಾಗೂ ರೀತಿಯಲ್ಲಿ ಶ್ರೀಗಂಧವು ದೊರೆಯುತ್ತದೆ. ಆದ್ದರಿಂದ ಶ್ರೀಗಂಧದ ಬೆಳವಣಿಗೆ ಮತ್ತು ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ದೊರೆಯುವ ಶ್ರೀಗಂಧದ ಇಳುವರಿ ಮತ್ತು ಸುವಾಸನೆಯುಕ್ತ ಮರದ ಅಂಶಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿ, ಖಚಿತವಾದ ದತ್ತಾಂಶವನ್ನು ತಯಾರು ಮಾಡುವ ಅವಶ್ಯಕತೆಯಿದೆ. ಇದರಿಂದ ಶ್ರೀಗಂಧದ ಬೆಳೆಗಾರರಿಗೆ ಖಚಿತವಾದ ಮಾಹಿತಿಯನ್ನು ಶ್ರೀಗಂಧದ ಮರದ ಕಟಾವು ಮಾಡುವ ಬಗ್ಗೆ ಹಾಗೂ ದೊರೆಯಬಹುದಾದ ಬೆಲೆ ಬಾಳುವ ಮರದ ಬಗ್ಗೆ ಸಿದ್ಧ ಮಾಹಿತಿ ದೊರಕಿಸಲು ಸಾಧ್ಯವಾಗುವುದು. ಈ ಮಾಹಿತಿಯಿಂದಾಗಿ ರಾಜ್ಯದಲ್ಲಿ ರೈತರು ಹೆಚ್ಚು ಹೆಚ್ಚು ಶ್ರೀಗಂಧವನ್ನು ಬೆಳೆಯಲು ಹಾಗೂ ನಾಟಿ ಮಾಡಿದ ಎಷ್ಟು ವರ್ಷಗಳಲ್ಲಿ ಕಟಾವು ಮಾಡಬಹುದು ಮತ್ತು ನಿರೀಕ್ಷಿಸಿದ ಆದಾಯವನ್ನು ಸಹ ಅಂದಾಜಿಸಲು ಸಾಧ್ಯವಾಗುವುದು. ಇಷ್ಟೇ ಅಲ್ಲದೆ ಅವರಿಗಿರುವ ಕೃಷಿ ಜಮೀನಿನಲ್ಲಿ ಯಾವ ಕೃಷಿಅರಣ್ಯ ಪದ್ಧತಿಯನ್ನು ಅನುಸರಿಸಿದಲ್ಲಿ, ಶ್ರೀಗಂಧದ ಮರದ ಬೆಳವಣಿಗೆಯು ಉತ್ತಮವಾಗಿರುತ್ತದೆಂದು ಸಹ ತಿಳಿಯಲಿದೆ.

ಯಾವುದೇ ಒಂದು ಕೃಷಿಅರಣ್ಯ ಪದ್ಧತಿಯಲ್ಲಿ ಬೆಳೆಯಬಹುದಾದ ಮರದ ಜಾತಿಯ ಬಗ್ಗೆ ಅದರ ಬೆಳವಣಿಗೆ ಮತ್ತು ಕಟಾವಿನ ನಂತರ ದೊರೆಯಬಹುದಾದ ಮರದ ಪ್ರಮಾಣದ ಬಗ್ಗೆ ದತ್ತಾಂಶವಿದ್ದಲ್ಲಿ, ರೈತರು ಸುಲಭವಾಗಿ ಅರ್ಥ ಮಾಡಿಕೊಂಡು, ಬೆಳೆಯಲು ಪ್ರಾರಂಭಿಸುವರು. ತನ್ಮೂಲಕ ರಾಜ್ಯದಲ್ಲಿ ಶ್ರೀಗಂಧದ ಮರದ ಪುನರ್ ಸ್ಥಾಪನೆಗೆ ದಾರಿ ತೋರಲಿದೆ.

# ಶ್ರೀಗಂಧದಮರದ ಇತಿಹಾಸ – ಡಾ. ಫ್ರಾನ್ಸಿಸ್ ಬುಕನಾನ್‌ರವರು ವರ್ಣಿಸಿರುವಂತೆ

**ಹೆಚ್.ಜಿ. ಶಿವಾನಂದಮೂರ್ತಿ,** ಭಾ.ಅ.ಸೇ (ನಿವೃತ್ತ), ಮೊ: 94481 26246

ಕ್ರಿ.ಶ. 1800 ರಲ್ಲಿ ಇಂಡಿಯಾದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವೆಲ್ಲೆಸ್ಲಿಯವರು ನಾಲ್ಕನೇ ಆಂಗ್ಲೋ ಮೈಸೂರು ಯುದ್ಧ (1799) ದಲ್ಲಿ ಟಿಪ್ಪು ಸುಲ್ತಾನ್ ಸೋಲನ್ನು ಅನುಭವಿಸಿದ ನಂತರ, ರಾಜರ ಆಳ್ವಿಕೆಯ ಮೈಸೂರು ರಾಜ್ಯವು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯ ಕಣ್ ತಪ್ಪಿನಿಂದ ಉದಯವಾಯಿತು. ಯುದ್ದದ ನಂತರ ಹೊಸದಾಗಿ ವಶಪಡಿಸಿಕೊಂಡ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು ವರದಿ ಸಲ್ಲಿಸಲು ಅಂದಿನ ಗವರ್ನರ್ ಜನರಲ್ ರವರು ಡಾ. ಬುಕನಾನ್‌ರವರನ್ನು ನೇಮಿಸಲಾಯಿತು. ಡಾ. ಬುಕನಾನ್ ರವರು ಈಸ್ಟ್ ಇಂಡಿಯಾ ಕಂಪನಿಯ ಬೆಂಗಾಲ್ ವೈದ್ಯಕೀಯ ಆಡಳಿತ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸ್ಕಾಟಿಷ್ ಸರ್ಜನ್ ರಾಗಿದ್ದರು. ವೃತ್ತಿಯಲ್ಲಿ ಸರ್ಜನ್ ಆಗಿದ್ದರೂ, ಡಾ. ಬುಕನಾನ್ ರವರು ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೌಗೋಳಿಕ ವಿಚಾರಗಳಲ್ಲಿ ಪರಿಣತಿಯನ್ನು ಹೊಂದಿದ್ದರು. ಸರ್ಕಾರದ ಆದೇಶದಂತೆ ಡಾ. ಬುಕನಾನ್ ರವರು ಮೈಸೂರು, ಮಲಬಾರ್ ಮತ್ತು ಕೆನರಾ ಪ್ರದೇಶಗಳ ಮುಖಾಂತರ 1800 ಮತ್ತು 1801 ರ ಅವಧಿಯಲ್ಲಿ ಪ್ರವಾಸ ಮಾಡಿದರು. ಅದರಂತೆ "ಮದ್ರಾಸ್, ಮೈಸೂರು, ಕೆನರಾ ಮತ್ತು ಮಲಬಾರ್ ಮುಖಾಂತರ ಒಂದು ಪ್ರವಾಸ" ಎನ್ನುವ ಶೀರ್ಷಿಕೆಯಡಿ ಇವರ ಪ್ರವಾಸದ ದಿನಚರಿಗಳು ಪ್ರಕಟವಾಗಿರುತ್ತದೆ.



ಅಂದಿನ ದಿನಮಾನಗಳಲ್ಲಿ ಅರಣ್ಯಗಳನ್ನು ಸಂಪೂರ್ಣವಾಗಿ ಆರ್ಥಿಕ ಸಂಪನ್ಮೂಲವೆಂದು ಪರಿಗಣಿಸಲಾಗಿತ್ತು. ಅರಣ್ಯಗಳು ಹೊಂದಿರುವ ಬೆಲೆಬಾಳುವ ಮರಗಳ ಸಂಯೋಜನೆಗಳಿಂದ ಅರಣ್ಯಗಳಿಗೆ ಬೆಲೆ ಕಟ್ಟಲಾಗುತ್ತಿತ್ತು. ಯಾವ ಅರಣ್ಯದಲ್ಲಿ ಸಾಗುವಾನಿ ಅಥವಾ ಶ್ರೀಗಂಧದ ಮರಗಳಿರುವವೋ ಅಂತಹ ಅರಣ್ಯಗಳು ಬೆಲೆ ಬಾಳುವ ಆಸ್ತಿಗಳಾಗುತ್ತಿದ್ದವು. ಇಂದು ಅರಣ್ಯಗಳನ್ನು ನೋಡುವ ದೃಷ್ಟಿ ಬದಲಾಗಿದ್ದು, ಅರಣ್ಯಗಳನ್ನು ಕೇವಲ ಆರ್ಥಿಕ ದೃಷ್ಟಿಯಿಂದ ಪರಿಗಣಿಸದೇ ಅವುಗಳು ನಿರ್ವಹಿಸುವ ಪರಿಸರ ಸಂಬಂಧಿತ ಪಾತ್ರದಿಂದಾಗಿ ಹಾಗೂ ಜನರ ಅಭಿವೃದ್ಧಿಗೆ ಸಹಾಯಕವಾಗಲಿವೆ ಮತ್ತು ಇಂದಿನ ಎಲ್ಲಾ ಅಭಿವೃದ್ಧಿಗೆ ಅಡಿಗಲ್ಲಾಗಿದೆ.

ಮೈಸೂರು ಸಂಸ್ಥಾನವು ಶ್ರೀಗಂಧದ ಸಂಪನ್ಮೂಲಕ್ಕೆ ಬಹಳ ವರ್ಷಗಳಿಂದ ಪ್ರಖ್ಯಾತಿಯಾಗಿತ್ತು, ಅತ್ಯುತ್ತಮವಾಗಿ ಶ್ರೀಗಂಧ ಬೆಳೆಯುವ ಪ್ರದೇಶವು ಮೈಸೂರು ರಾಜ್ಯದ ಭಾಗವಾಗಿತ್ತು. ಅಲ್ಪ–ಸ್ವಲ್ಪ ಶ್ರೀಗಂಧವು ಈಸ್ಟ್ ಇಂಡಿಯಾ ಕಂಪನಿಯ ಪ್ರಾದೇಶಿಕ ಸ್ಥಳಗಳಾದ ಕೆನರಾ ಮತ್ತು ಕೊಳ್ಳೇಗಾಲ ಪ್ರದೇಶಗಳಲ್ಲಿ ಸಹ ಬೆಳೆಯಲಾಗುತ್ತಿತ್ತು. ಅಂದಿನ ದಿನಗಳಲ್ಲಿ ಶ್ರೀಗಂಧವು ಸರ್ಕಾರಕ್ಕೆ ಪ್ರಮುಖ ಆದಾಯವನ್ನು ತರುವ ಮೂಲವಾಗಿತ್ತು. ಇದರಿಂದ ಡಾ. ಬುಕನಾನ್ ರವರು ಶ್ರೀಗಂಧದ ಜಾತಿಯ ಮರದ ಬಗ್ಗೆ ಅವರ ಪ್ರವಾಸದ ಸಂದರ್ಭದಲ್ಲಿ ಬಹಳ ಆಸಕ್ತಿ ವಹಿಸಿದ್ದರು. ಅವರು 200 ವರ್ಷಗಳ ಹಿಂದೆ ಕೈಗೊಂಡ ಪ್ರವಾಸದ ದಿನಚರಿಗಳಲ್ಲಿ ಶ್ರೀಗಂಧದ ಮರದ ಬಗ್ಗೆ ಹಾಗೂ ಶ್ರೀಗಂಧಕ್ಕಿರುವ ಮೌಲ್ಯದ ಬಗ್ಗೆ ಬರೆದಿರುವರು.

**ಬುಕನಾನ್ ರವರ ಪ್ರವಾಸದಲ್ಲಿ ಕಂಡುಕೊಂಡ ಶ್ರೀಗಂಧ**

ಬುಕನಾನ್ ರವರು ಮೊದಲ ಬಾರಿಗೆ ಶ್ರೀಗಂಧದ ಮರವನ್ನು ಮೈಸೂರು ರಾಜ್ಯಕ್ಕೆ ಪ್ರವೇಶಿಸಿದ ನಂತರ ಮಾಲೂರಿನಲ್ಲಿ ನೋಡಿದ್ದರು. ಶ್ರೀಗಂಧದ ಮರಗಳನ್ನು ಸೀಗೇಕಾಯಿ (Acacia concinna) ಬಳ್ಳಿಯ ಸಂಗಡ ಕೋಟೆಯ ಸುತ್ತ ಬೆಳೆಸಲಾಗಿತ್ತು. ಸೀಗೆಕಾಯಿ ಬಳ್ಳಿಯು ತುಂಬಾ ಮುಳ್ಳುಗಳಿಂದ ಕೂಡಿರುವುದರಿಂದ ಇದನ್ನೂ ಬೇಲಿಗಳಲ್ಲಿ ಬೆಳೆಸಲಾಗುತ್ತಿತ್ತು ಮತ್ತು ಇದಿರುವೆಡೆ ಯಾವುದೇ ಪ್ರಾಣಿಗಳು ನುಸುಳಲು ಸಾಧ್ಯವಿಲ್ಲ. ಈ ರೀತಿಯಲ್ಲಿ, ಸೀಗೆಕಾಯಿ ಬಳ್ಳಿಯು ಕೋಟೆಗಷ್ಟೇ ರಕ್ಷಣೆ ನೀಡುವುದಲ್ಲದೇ, ಶ್ರೀಗಂಧದ ಮರಗಳಿಗೂ ರಕ್ಷಣೆ ಒದಗಿಸಿತ್ತು. ಅದೃಷ್ಟವಶಾತ್ ಶ್ರೀಗಂಧದ ಮರಕ್ಕಿರುವ ಒಂದು ವಿಶೇಷ ಗುಣವೆಂದರೆ, ಇದೊಂದು ಅರೆ ಪರಾವಲಂಬಿ ಮತ್ತು ಬೇರೆ ಸಸ್ಯಗಳಿಂದ ತನಗೆ ಬೇಕಾದ ಪೋಷಕಾಂಶಗಳನ್ನು ತನ್ನಲ್ಲಿರುವ ಹಾಸ್ಟೋರಿಯಾಗಳ ಸಂಪರ್ಕದಿಂದ ಪಡೆದುಕೊಳ್ಳುತ್ತದೆ. ಶ್ರೀಗಂಧದ ಮರಗಳ ಈ ಗುಣವನ್ನು 19ನೇ ಶತಮಾನದ ಅಂತ್ಯದಲ್ಲಿ ಕಂಡುಕೊಳ್ಳಲಾಯಿತು. ಅನೇಕ ದ್ವಿದಳ ಧಾನ್ಯಕ್ಕೆ ಸಂಬಂಧಿಸಿದ ಸಸ್ಯಗಳೊಡನೆ, ಅಕೇಶಿಯಾ ಜಾತಿಯ ಸಸ್ಯಗಳು ಸೇರಿದಂತೆ ಶ್ರೀಗಂಧದ ಮರಕ್ಕೆ ಅತ್ಯುತ್ತಮವಾದ ಅತಿಥಿ ಸಸ್ಯಗಳಾಗಿರುತ್ತವೆ. ಆದರೆ ಶ್ರೀಗಂಧದ ಮರಗಳನ್ನು ಸೀಗೆಕಾಯಿ ಬಳ್ಳಿಯ ಸಂಗಡ ಬೆಳೆಯುವುದು ಶತಮಾನಗಳ ಹಿಂದಿನ ಆಕಸ್ಮಿಕವಾಗಿ ಅಥವಾ ಯಾರಾದರೂ ಯೋಚಿಸಬಹುದಾದ ಇದೊಂದು ಪುರಾತನ ಜಾಣತನವಾಗಿದೆ.

ಡಾ. ಬುಕನಾನ್ ರವರು ಮೈಸೂರು ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಗಂಧವು ರಾಜ್ಯದ ಒಂದು ಪ್ರಮುಖ ವಸ್ತುವಾಗಿತ್ತು. ಶ್ರೀಗಂಧದ ಮರಗಳು ಅರಣ್ಯ ಪ್ರದೇಶದಲ್ಲಷ್ಟೇ ಅಲ್ಲದೆ, ಕೃಷಿ ಭೂಮಿಯ ಸುತ್ತಮುತ್ತ ಮತ್ತು ಜನವಸತಿಯ ಸ್ಥಳದಲ್ಲಿ ಸ್ವಾಭಾವಿಕವಾಗಿ ಶ್ರೀಗಂಧದ ಮರಗಳು ಬೆಳೆಯುತ್ತಿದ್ದವು. ಆದರೆ ಇವುಗಳನ್ನು ಅಮಲ್ದಾರ್ ಅಥವಾ ಅಧಿಕಾರಿಗಳ ಅನುಮತಿಯಿಲ್ಲದೇ ಕಟಾವು ಮಾಡುವಂತಿರಲಿಲ್ಲ. ಅಂದಿನ ದಿನಗಳಲ್ಲಿ ಶ್ರೀಗಂಧದ ಮರದ ತೊಗಟೆಯನ್ನು ಅಡಿಕೆಯ ಬದಲಿಗೆ ಉಪಯೋಗಿಸುವ ಬಗ್ಗೆ ತಿಳಿಸಿರುವರು.

ಶ್ರೀಗಂಧದ (Santalum album) ಆಂಗ್ಲ ವ್ಯಾಪಾರಿಗಳ ಸ್ಯಾಂಡಲ್‌ವುಡ್‌ನ ಮಾರಾಟಕ್ಕೆ ಯೋಗ್ಯವಾದ ಬೇರಿನ ಹತ್ತಿರದಲ್ಲಿ ಭೂಮಿಯಿಂದ ಸ್ವಲ್ಪ ಮೇಲ್ಭಾಗದ ಮರದ ದಪ್ಪ 10" ವ್ಯಾಸ (ಡಯಾಮೀಟರ್) ಇರಬೇಕು. ಬಂಡೆಗಳಿರುವ / ಕಲ್ಲು ಮಣ್ಣಿನಿಂದ ಕೂಡಿದ ಸ್ಥಳದಲ್ಲಿ ಬೆಳೆದಿರುವ ಮರದ ಗುಣಮಟ್ಟವು ಅತ್ಯುತ್ತಮವಾಗಿರುವುದು. ಮರದ ಬುಡ, ಭೂಮಿಯ ತಳಭಾಗದ ಹಾಗೂ ಬೇರುಗಳಿಂದ ಸ್ವಲ್ಪ ಮೇಲ್ಭಾಗದ ಮರವು ಅತ್ಯಂತ ಬೆಲೆ ಬಾಳುವ ಮರದ ಭಾಗವಾಗಿರುತ್ತದೆ. ಖಾಸಗೀ ಭೂಮಿಯಲ್ಲಿ ಬೆಳೆದಿರುವ ಶ್ರೀಗಂಧದ ಮರಕ್ಕೆ ಅಂದಿನ ದಿನಗಳಲ್ಲೂ ಸಹ ಪ್ರೋತ್ಸಾಹಧನ ನೀಡಲಾಗುತ್ತಿತ್ತು.

ಟಿಪ್ಪು ಸುಲ್ತಾನರಿಗೆ ಶ್ರೀಗಂಧದ ಮರಗಳನ್ನು "ರಾಯಲ್ ಮರ – Royal tree", ರಾಜಯೋಗ್ಯ ಮರವೆಂದು ಘೋಷಿಸಿದ ಗೌರವ ಸಂದರೂ ಬುಕನಾನ್ ರವರ ವಿವರಣೆಯಿಂದ ತಿಳಿದು ಬರುವುದೇನೆಂದರೆ, ಟಿಪ್ಪು ಸುಲ್ತಾನ್ ಆಳ್ವಿಕೆಗಿಂತಲೂ ಮೊದಲೇ ಶ್ರೀಗಂಧದ ಮರಕ್ಕೆ ವಿಶೇಷವಾದ ಸ್ಥಾನಮಾನವಿತ್ತೆಂದು ತಿಳಿದುಬರುತ್ತದೆ.

ಡಾ. ಬುಕನಾನ್ ರವರು ಮಾಲೂರು ಸಮೀಪದ ಖಾಸಗೀ ಭೂಮಿಯಲ್ಲಿ 20 ವರ್ಷ ಹಳೆಯದಾದ ಶ್ರೀಗಂಧದ ಮರವನ್ನು ನೋಡಿರುವುದಾಗಿ ತಿಳಿಸಿರುವುದರಿಂದ, ಟಿಪ್ಪು ಸುಲ್ತಾನರ ತಂದೆಯವರಾದ ಹೈದರ್ ಅಲಿಯವರು ಸಹ ಶ್ರೀಗಂಧದ ಮರಗಳನ್ನು ಬೆಳೆಯಲು ಉತ್ತೇಜನ ನೀಡಿರುವುದಾಗಿ ತಿಳಿಸಿರುವರು. (ವಿ.ಸೂ: ಹೈದರ್ ಅಲಿಯವರು ಉತ್ತಮವಾದ ಶ್ರೀಗಂಧದ ಕೋಟೆಯನ್ನು ಶ್ರೀರಂಗಪಟ್ಟಣದಲ್ಲಿ ಕಟ್ಟಿರುವ ಗೌರವ ಸಲ್ಲುತ್ತದೆ. ಈ ಕಟ್ಟಡವು ಬಹಳ ವರ್ಷಗಳವರೆಗೆ ಉತ್ತಮ ಸ್ಥಿತಿಯಲ್ಲಿತ್ತು ಹಾಗೂ ಈ ಕಟ್ಟಡವನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ಜೈಲಾಗಿ, ಅದರಲ್ಲೂ ವಿಶೇಷವಾಗಿ ಸ್ವಾತಂತ್ರ ಹೋರಾಟಗಾರರನ್ನು ಬಂಧನದಲ್ಲಿಡಲು ಉಪಯೋಗಿಸುತ್ತಿದ್ದರು. ಸ್ವಾತಂತ್ರ್ಯಾನಂತರದಲ್ಲಿ ಅಂದರೆ 1947 ರಲ್ಲಿ ಈ ಕಟ್ಟಡವನ್ನು ಪರಿವರ್ತನೆ ಮಾಡಿ, ಸರ್ಕಾರಿ ಪ್ರೌಢಶಾಲೆಯಾಗಿ ಕೆಲವು ಸಮಯ ಉಪಯೋಗಿಸಲಾಗಿತ್ತು).

ಡಾ. ಬುಕನಾನ್ ರವರ ವಿವರಣೆಯಿಂದ

ತಿಳಿದು ಬರುವ ಸಾಮಾನ್ಯ ಅಂಶವೆಂದರೆ ಶ್ರೀಗಂಧದ ಮರಗಳು, ಒಣ ಕಲ್ಲಿನಲ್ಲಿರುವ ಭೂಮಿಯಲ್ಲಿ ಅತ್ಯುತ್ತಮವಾಗಿ ಬೆಳೆಯುತ್ತವೆ ಹಾಗೂ ತೇವಾಂಶ ಹೊಂದಿರುವ ಫಲವತ್ತಾದ ಭೂಮಿಯಲ್ಲಿ ಶ್ರೀಗಂಧದ ಮರಗಳು ಬೇಗನೆ ಬೆಳೆದರೂ ಹೆಚ್ಚಿನ ಎಣ್ಣೆ ಅಂಶ (ಸುವಾಸನೆ)ವನ್ನು ಹೊಂದಿರುವುದಿಲ್ಲ ಮತ್ತು ಎಲ್ಲಾ ಸಂದರ್ಭಗಳಲ್ಲೂ ಗುಣಮಟ್ಟದಲ್ಲಿ ಉತ್ಕೃಷ್ಟವಾಗಿರುವುದಿಲ್ಲ. ಶ್ರೀಗಂಧದ ಮರಗಳು ಎತ್ತರದ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಬೆಳೆಯುವುದಿಲ್ಲ, ಆದರೆ ಅರಣ್ಯದ ಅಂಚಿನಲ್ಲಿ ಉತ್ತಮವಾಗಿ ಬೆಳೆಯುತ್ತವೆ. ಇಲ್ಲಿ ಮತ್ತೊಂದು ಸಂದರ್ಭದಲ್ಲಿ ಹೇಳಿರುವಂತೆ ಗುಣಮಟ್ಟದ ಶ್ರೀಗಂಧವನ್ನು ಮೈಸೂರು ರಾಜ್ಯದ ನಗರ ಪ್ರದೇಶ (ಈ ಪ್ರದೇಶವು ಮೂಲತಃ ಈಗಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆ) ಮತ್ತು ಕೂರ್ಗ್ ರಾಜ್ಯದ ಗಡಿಭಾಗದ ಹೆಚ್.ಡಿ. ಕೋಟೆ ಸುತ್ತಮುತ್ತ ದೊರೆಯುವುದಾಗಿ ತಿಳಿಸಿರುತ್ತಾರೆ. ಈ ಪ್ರದೇಶಗಳು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿರುವುದರಿಂದ ಉತ್ತಮವಾದ ಮಣ್ಣು ಮತ್ತು ಹೆಚ್ಚಿನ ಮಳೆ ಬೀಳುವ ಪ್ರದೇಶಗಳಾಗಿರುತ್ತವೆ. ಇಕ್ಕೇರಿ (ಶಿವಮೊಗ್ಗ ಜಿಲ್ಲೆಯ ಸಾಗರ ಸಮೀಪದಲ್ಲಿದೆ).

ಸುತ್ತಮುತ್ತ ಬೆಳೆಯುವ ಶ್ರೀಗಂಧದ ಗುಣಮಟ್ಟವು ಪೂರ್ವದಲ್ಲಿ ಮತ್ತು ದಕ್ಷಿಣದಲ್ಲಿ ಬೆಳೆಯುವ ಶ್ರೀಗಂಧಕ್ಕಿಂತಲೂ ಉತ್ತಮವಾಗಿದೆಯೆಂದು ನಮೂದಿಸಿರುವರು. ಅತ್ಯುತ್ತಮ ಗುಣಮಟ್ಟದ ಶ್ರೀಗಂಧದ ಮರಗಳನ್ನು ಸಾಧಾರಣಕ್ಕಿಂತ ಸ್ವಲ್ಪ ಹೆಚ್ಚು ಮಳೆ ಬೀಳುವ ಮತ್ತು ಒಳ್ಳೆಯ ಮಣ್ಣಿರುವ ಭೂ ಪ್ರದೇಶದಲ್ಲಿ ಬೆಳೆಯಬಹುದು. ಈ ಮೇಲಿನಂತೆ ಶ್ರೀಗಂಧದ ಮರಗಳ ಬೆಳವಣಿಗೆ ಬಗ್ಗೆ ಇರುವ ತದ್ವಿರುದ್ಧ ಅಭಿಪ್ರಾಯಗಳು ನಂತರದ ವರ್ಷಗಳಲ್ಲೂ ಮತ್ತು ಇಂದಿಗೂ ಸಹ ಮುಂದುವರಿದಿದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮತ್ತು ಸಂಶೋಧನಾ ಕೇಂದ್ರಗಳು ಶ್ರೀಗಂಧದ ಮರಗಳ ಬಗ್ಗೆ ಸಂಶೋಧನೆ ಕೈಗೊಂಡ ನಿಖರವಾದ ಮಾಹಿತಿಯನ್ನು ರಾಜ್ಯದಲ್ಲಿಯ ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ಬೆಳೆದಲ್ಲಿ, ರೈತರಿಗೆ ಹೆಚ್ಚು ಅನುಕೂಲವಾಗುವುದೆನ್ನುವ ಬಗ್ಗೆ ಬೆಳಕನ್ನು ಚೆಲ್ಲಬೇಕಿದೆ. ಇದರಿಂದ ಕರ್ನಾಟಕದಲ್ಲಿ ಕಡಿಮೆಯಾಗುತ್ತಿರುವ ಶ್ರೀಗಂಧದ ಉತ್ಪಾದನೆಗೆ ಮರುಜೀವ ಕೊಟ್ಟಂತಾಗುವುದು. ಜೊತೆಗೆ ಈಗ ಕೆ.ಎಸ್.ಡಿ.ಎಲ್. ಸಂಸ್ಥೆಯು ಆಮದು ಮಾಡಿಕೊಳ್ಳುತ್ತಿರುವ ಶ್ರೀಗಂಧದ ಎಣ್ಣೆಯನ್ನು ರಾಜ್ಯದಲ್ಲಿಯೇ ಉತ್ಪಾದನೆಯಾಗುವಂತೆ ತನ್ಮೂಲಕ ರೈತರ ಆರ್ಥಿಕತೆ ಹೆಚ್ಚಾಗುವಂತೆ ಮಾಡಲು ವಿಫುಲ ಅವಕಾಶಗಳಿವೆ.

# ಅರಣ್ಯ ಕೃಷಿಯ ವಿಶಿಷ್ಟ ಸಾಧಕ: ನಿವೃತ್ತ ಅಧಿಕಾರಿ ಸಿ.ಬಿ. ಪಾಟೀಲ

**ಕೃಪೆ: ಉದಯಕಾಲ ಪತ್ರಿಕೆ ಲೇಖಕ: ಸುರೇಶ್ ಗುದಗನವರ, ರಾಮದುರ್ಗ**

ಕೃಷಿಕ ನಿರೀಕ್ಷಿತ ಹಾಗೂ ಅನಿರೀಕ್ಷಿತ ಸಮಸ್ಯೆಗಳನ್ನು ತನ್ನ ವೃತ್ತಿಯುದ್ದಕ್ಕೂ ಎದುರಿಸಬೇಕಾಗಿ ಬಂದಿರುವುದು ಅನಿವಾರ್ಯ. ಕೃಷಿಯಲ್ಲಿ ಸಮಸ್ಯೆಗಳು ಹೇರಳವಾಗಿಯೋ, ಹಾಗೆಯೇ ಅದಕ್ಕೆ ಪರಿಹಾರಗಳೂ ಕೂಡ ಅಪರಿಮಿತವಾಗಿವೆ ಎನ್ನುವುದಕ್ಕೆ ಉದಾಹರಣೆ ನಿವೃತ್ತ ಅರಣ್ಯಾಧಿಕಾರಿ ಚಂದ್ರಗೌಡ ಬಸನಗೌಡ ಪಾಟೀಲ. ಅವರು ಬರಡು ಭೂಮಿಯಲ್ಲಿ ದಟ್ಟ ಅರಣ್ಯವನ್ನು ಬೆಳೆಸಿ ಎಲ್ಲರ ಗಮನ ಸೆಳೆದಿದ್ದಾರೆ.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸಿದ್ನಾಳದವರಾದ ಸಿ.ಬಿ. ಪಾಟೀಲರು 1959 ರ ಜೂನ್ 1 ರಂದು ಜನಿಸಿದರು. ತಂದೆ ಬಸನಗೌಡ ಮತ್ತು ತಾಯಿ ಪಾರ್ವತಿ. ದೊಡ್ಡ ಹಿಡುವಳಿದಾರರಾದ ಬಸನಗೌಡ ಉತ್ತಮ ಕೃಷಿಕರು. ಚಂದ್ರಗೌಡರು ಬೆಳಗಾವಿಯ ಆರ್.ಎಲ್.ಎಸ್ ಕಾಲೇಜಿನಿಂದ 1980 ರಲ್ಲಿ ಬಿಎಸ್ಸಿ ಪದವಿಯನ್ನು ಪಡೆದು, ಮನೆತನದ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡರು. ಆರು ವರ್ಷಗಳ ನಂತರ ಅವರು ಕರ್ನಾಟಕ ಅರಣ್ಯ ಇಲಾಖೆಯಲ್ಲಿ ವನಪಾಲಕರಾಗಿ ಸೇವೆಗೆ ಸೇರಿಕೊಳ್ಳುತ್ತಾರೆ. 1996 ರಲ್ಲಿ ಅರಣ್ಯಾಧಿಕಾರಿಯಾಗಿ ಬಡ್ತಿ ಹೊಂದಿ ಹಿರೇಕೆರೂರು, ಕಾಕತಿ, ಖಾನಾಪುರ, ಲೊಂಡಾ ಮುಂತಾದ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತಾರೆ. 2016 ರಲ್ಲಿ ಅವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಪದೋನ್ನತಿ ಪಡೆದು, ಖಾನಾಪುರ ಉಪ ವಿಭಾಗದಲ್ಲಿ ಮೂರು ವರ್ಷಗಳವರೆಗೆ ಸೇವೆ ಸಲ್ಲಿಸಿ, 2019 ರಲ್ಲಿ ನಿವೃತ್ತಿಯಾಗುತ್ತಾರೆ.

ಏಳು ಎಕರೆ ಜಮೀನಿನಲ್ಲಿ ಮರಗಳನ್ನು ಸಂರಕ್ಷಿಸಲು ಸುತ್ತಲೂ ಎರಡು ಸಾವಿರ ಅಡಿಯಷ್ಟು ಕಲ್ಲಿನ ಗೋಡೆಯನ್ನು ನಿರ್ಮಿಸಿದ್ದಾರೆ. ಹತ್ತು ವರ್ಷಗಳ ಹಿಂದೆಯೇ ಬರಡು ಭೂಮಿಯನ್ನು ಪರಿವರ್ತಿಸಿ 3500 ಶ್ರೀಗಂಧ, 1000 ಹೆಬ್ಬೇವು, 800 ಮಾವು, 700 ಬೆಟ್ಟದ ನೆಲ್ಲಿ, 600 ರಕ್ತ ಚಂದನ, 300 ತೆಂಗು, 250 ಬೇವು ಗಿಡಗಳನ್ನು ನಾಟಿ ಮಾಡಿದ್ದಾರೆ. ಎಲ್ಲಾ ಮರಗಳೂ ಹುಲುಸಾಗಿ ಮತ್ತು ಸಮೃದ್ಧವಾಗಿ ಬೆಳೆಯುತ್ತಿವೆ.

ಅಲ್ಲಿಂದ ಸ್ವಲ್ಪ ಮುಂದೆ ಹೋದರೆ ಎಡಭಾಗದಲ್ಲಿ 12 ಎಕರೆ ಜಮೀನಿನಲ್ಲಿ ಚಂದ್ರಗೌಡರು, ಏಳು ವರ್ಷಗಳ ಹಿಂದೆ 2500 ಹೆಬ್ಬೇವು, 2000 ಮಾವು, 2000 ಶ್ರೀಗಂಧ, 1500 ಬೆಟ್ಟದ ನೆಲ್ಲಿ, 400 ರಕ್ತ ಚಂದನ, 300 ತೇಗ, 250 ತೆಂಗು ಸಸಿಗಳನ್ನು ನಾಟಿ ಮಾಡಿದ್ದಾರೆ. ನೀರಾವರಿ ಉದ್ದೇಶಕ್ಕಾಗಿ ಮೂರು ಕೊಳವೆ ಬಾವಿಗಳು ಇದ್ದರೂ, ಈ ಪ್ರದೇಶದಲ್ಲಿ ವರ್ಷಕ್ಕೆ 700 ರಿಂದ 800 ಮಿ.ಮೀ. ಮಳೆಯಾಗುವುದರಿಂದ ಅವರು ನೀರಿನ ಸಂಗ್ರಹಣೆಗೋಸ್ಕರ ಮಳೆ ನೀರು ಕೊಯ್ಲು ಮಾಡಿ ಅಂದಾಜು 400 ಅಡಿ ಉದ್ದ, 70 ಅಡಿ ಅಗಲವಿರುವ ಮತ್ತು 15 ಅಡಿ ಆಳವಿರುವ ಕೆರೆ ನಿರ್ಮಾಣ ಮಾಡಿಕೊಂಡಿದ್ದು, ಆ ಕೆರೆಯಲ್ಲಿ ಮೀನುಗಾರಿಕೆಯನ್ನು ಕೂಡ ಮಾಡಲಾಗುತ್ತದೆ. ಅವರು ಕೊಟ್ಟಿಗೆ ಗೊಬ್ಬರದ ಸಲುವಾಗಿ 7 ದೇಸಿ ಆಕಳುಗಳನ್ನು ಸಾಕಿದ್ದಾರೆ.



ಅರಣ್ಯ ಜಾತಿಯ ಮರ–ಗಿಡಗಳು ಆಗಿರುವುದರಿಂದ ಆದಾಯವನ್ನು ಬಹಳ ವರ್ಷಗಳ ನಂತರ ನಿರೀಕ್ಷಿಸಲಾಗುತ್ತಿದೆ. ಸದ್ಯ ಮಾವು ಉತ್ತಮ ಫಸಲು ನೀಡುತ್ತಿರುವುದರಿಂದ ಹಾಗೂ ತೆಂಗಿನ ಫಸಲು ಸಮೃದ್ಧಿಯಾಗಿರುವುದರಿಂದ ನಿರ್ವಹಣೆಗೆ ಏನೂ ತೊಂದರೆಯಾಗುತ್ತಿಲ್ಲ. ಅವರ ಸತತ ಪರಿಶ್ರಮದ ಬಳಿಕ ಗಿಡಗಳು ಮರವಾಗಿ ಬೆಳೆದಿದ್ದು, ಇದೀಗ ದಟ್ಟ ಅರಣ್ಯವಾಗಿ ಮಾರ್ಪಾಡಾಗಿದೆ. ಕಾಡಿನಲ್ಲಿ ಹಕ್ಕಿಗಳ ಇಂಚರ, ಚಿಲಿಪಿಲಿಯ ನಾದವಿದೆ. ಭೂಮಿಯಲ್ಲಿ ಕಾಡು, ಹಸಿರು ಇಲ್ಲದೇ ಇದ್ದರೆ ಮನುಷ್ಯನ ಉಳಿವು ಸಾಧ್ಯವಿಲ್ಲ ಎಂಬುವುದು ಸಿ.ಬಿ. ಪಾಟೀಲ ಅವರ ಮನದ ಮಾತು.

ನಿವೃತ್ತಿಯ ನಂತರವೂ ಅರಣ್ಯೀಕರಣದ ಬಗ್ಗೆ ತೋರುವ ಪ್ರೀತಿ, ಮರ ಬೆಳೆಸುವುದರಲ್ಲಿನ ಆಸಕ್ತಿ ಮತ್ತು ಪ್ರಾಣಿ, ಪಕ್ಷಿಗಳ ಮೇಲಿನ ಪ್ರೀತಿ ಅಗಾಧವಾದದ್ದು. ಆಶ್ಚರ್ಯವೆಂದರೆ ತಮ್ಮ ಮೊಮ್ಮಗನ ಹೆಸರನ್ನು ಅವರು ಕೃಷಿಕನೆಂದು ಇಟ್ಟಿರುವುದು. ಒಟ್ಟು ಹತ್ತೊಂಭತ್ತು ಎಕರೆ ಕಲ್ಲಿನ ಗುಡ್ಡವನ್ನು ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ್ದು, ಉತ್ತರ ಕರ್ನಾಟಕದ ಪ್ರಸಿದ್ಧ ಕ್ಷೇತ್ರವಾದ ರಾಮದುರ್ಗ ತಾಲ್ಲೂಕಿನ ಗೊಡಚಿಯ ಶ್ರೀ ವೀರಭದ್ರೇಶ್ವರ ಕ್ಷೇತ್ರದಿಂದ ಕಟಕೋಳದ ಮಾರ್ಗದಲ್ಲಿ ಕೇವಲ 3 ಕಿ.ಮೀ. ಅಂತರದಲ್ಲಿ ಸಿ.ಬಿ. ಪಾಟೀಲ ಅವರ ಅರಣ್ಯ ಕೃಷಿಯಲ್ಲಿ ಕಾಣಬಹುದು.

# ಸಾಗುವಾನಿ ಮರಗಳನ್ನು ಬೆಳೆದ ರೈತನ ಯಶೋಗಾಥೆ

ಶ್ರೀ ಗುರುಮೂರ್ತಿ, ನಿವೃತ್ತ ಜಂಟಿ ಕೃಷಿ ನಿರ್ದೇಶಕರು ಮೊ.9945754650

ನನ್ನ 20 ಎಕರೆ ಜಮೀನಿನಲ್ಲಿ 1984 ರಿಂದಲೂ ತೆಂಗು, ಅಡಿಕೆ, ಮಾವು ಮರಗಳನ್ನು ಸಮೃದ್ಧವಾಗಿ ಬೆಳೆಸಿರುವ ಜೊತೆಗೆ ತೇಗ, ಸಿಲ್ವರ್ ಓಕ್, ಇತರ ಅರಣ್ಯ ಮರಗಳನ್ನು ಬೆಳೆಸಲು ಪರಿಚಯವಿರುವ ಹಲವು ವಲಯ ಅರಣ್ಯಾಧಿಕಾರಿಗಳು (ಆರ್.ಎಫ್.ಓ) ಅರಣ್ಯ ಮರಗಳನ್ನು ಬೆಳೆಯುವಂತೆ ಹುರಿದುಂಬಿಸಿದರು. ಏಕೆಂದರೆ ತೋಟಕ್ಕೆ ಒಂದು ಅರಣ್ಯ ಶ್ರೀಮಂತಿಕೆಯ ದೃಷ್ಯ ದೊರೆಯಲಿದೆಯೆಂದು.

ಮೊದಲ ಬಾರಿಗೆ 1984 ರಲ್ಲಿ ಪಾವಗಡದಿಂದ 500 ತೇಗ ಹಾಗೂ 100 ಸಿಲ್ವರ್ ಓಕ್ ಮರಗಳನ್ನು ಜಮೀನಿನ ಸುತ್ತಲೂ ಹಾಗೂ ಬದುಗಳ ಮೇಲೆ ನೆಟ್ಟು ಬೆಳೆಸಲಾಯಿತು. ನಂತರ 1998–99 ರಲ್ಲಿ ಕೋಲಾರ ಜಿಲ್ಲೆಯ ಅರಣ್ಯ ಸಸ್ಯ ಕ್ಷೇತ್ರದಿಂದ ಸುಮಾರು 2000 ಸಾಗುವಾನಿ, 1000 ಸಿಲ್ವರ್ ಓಕ್ ಹಾಗೂ 100 ಹಲಸಿನ ಸಸಿಗಳನ್ನು ತಂದು ಬೆಳೆಸಿದ್ದೇನೆ. 2004 ರಲ್ಲಿ ವಿವಿಧ ಅರಣ್ಯ ಸಸ್ಯಕ್ಷೇತ್ರಗಳಿಗೆ ಭೇಟಿ ನೀಡಿದಾಗ ಪುನಃ 8000 ಸಾಗುವಾನಿ 6000 ಶ್ರೀಗಂಧ ಹಾಗೂ 3000 ಸಿಲ್ವರ್ ಸಸಿಗಳನ್ನು ತಂದು ನೆಟ್ಟು ಪೋಷಿಸುತ್ತಾ ಬಂದಿದ್ದೇನೆ.

ನನ್ನ ಜಮೀನಿಗಾಗಿ ಬೋರ್‌ವೆಲ್‌ಗಳನ್ನು ಅವಲಂಬಿಸಬೇಕಾಗಿದ್ದರಿಂದ, ಕಡಿಮೆ ನೀರು ಮತ್ತು ಕೂಲಿಕಾರರ ಯೋಜನೆಯಲ್ಲಿ ಅರಣ್ಯ ಮರಗಳ ಬೆಳೆಗೆ ಪ್ರಾಶಸ್ತ್ಯ ನೀಡಿದೆ. ಇಂದಿಗೆ ಸುಮಾರು 30,000 ವಿವಿಧ ಬಗೆಯ ಅರಣ್ಯ ಸಸಿಗಳನ್ನು ಬೆಳೆಸಿರುವೆ. ಹಲವು ಜನರಿಂದ ತಿಳಿದು ಬಂದಿದ್ದೇನೆಂದರೆ ಮರಗಳು ಕಟಾವು ಮಾಡಿದಾಗ ಹೆಚ್ಚಾಗಿ ಹಣ ಬರುವುದೆಂದು ಹಾಗಾಗಿ ನಾನು ಸರ್ಕಾರಿ ನೌಕರಿಯಲ್ಲಿ ಓಡಾಡಿದ ಕಡೆಗಳಲೆಲ್ಲಾ ಸಸಿಗಳನ್ನು ತಂದು ನೆಟ್ಟು ಪೋಷಿಸಿದ್ದೇನೆ. 1984 ರಲ್ಲಿ ನೆಟ್ಟ ಸಿಲ್ವರ್ ಓಕ್ ಮರಗಳನ್ನು 10 ವರ್ಷಗಳ ನಂತರ ಹಲವು ದಪ್ಪ ಮರಗಳನ್ನು ಪ್ರತಿ ಟನ್‌ಗೆ 6000 ದಂತೆ ಮಾರಿ ಒಟ್ಟು ರೂ.6 (ಆರು) ಲಕ್ಷಗಳನ್ನು ಪಡೆದಿದ್ದೇನೆ.

ನಂತರದ ವರ್ಷಗಳಲ್ಲಿ ಟನ್‌ಗೆ ರೂ.5000/–ಗಳಂತೆ 2020–21 ರಲ್ಲಿ ಈಗ ರೂ.3500/–ಗಳಂತೆ ಮಾರಿ ಒಟ್ಟು ರೂ.20 (ಇಪ್ಪತ್ತು) ಲಕ್ಷ ಬಂದಿರುತ್ತದೆ. ಇದರ ಜೊತೆಗೆ ಕಟಾವು ಮಾಡಿ ಅವರಿಗೆ ಬೇಡದಿದ್ದ ರೆಂಬೆಗಳು ಅಂದರೆ 16 ಇಂಚು ಸುತ್ತಳತೆ ಇರುವ ಮರದ ಭಾಗವನ್ನು ತೆಗೆದುಕೊಳ್ಳುವುದಿಲ್ಲ. ಶೇ.50 ರಷ್ಟು ಮರದ ಭಾಗ ಉಪಯೋಗವಾಗುವುದಿಲ್ಲ. ಈ ಮರದ ಭಾಗವನ್ನು ಉರುವಲಿಗೆ ಉಪಯೋಗಿಸಿಕೊಳ್ಳಿ, ಪುಕ್ಕಟ್ಟೆಯಾಗಿ ತೆಗೆದುಕೊಂಡು ಹೋಗಿ ಎಂದು ಹೇಳಿದರ ಯಾರೂ ತೆಗೆದುಕೊಂಡು ಹೋಗುವುದಿಲ್ಲ. ಹೆಬ್ಬೇವು ಬೆಳೆಸಿದರೆ ಕೇವಲ 7–8 ವರ್ಷಗಳಲ್ಲಿ ಒಳ್ಳೆಯ ಆದಾಯ ಬರುವುದೆಂದು ಕೆಲವರು ತಿಳಿಸಿದಂತೆ 2010–11 ರಲ್ಲಿ ಪುನಃ 2500 ಹೆಬ್ಬೇವಿನ ಸಸಿಗಳನ್ನು ಶ್ರೀ ರಘುನಾಥ್ ರವರ ತೋಟದಿಂದ ಹಾಗೂ ಅರಣ್ಯ ಸಸ್ಯಕ್ಷೇತ್ರದಿಂದ ತಂದು ಬೆಳೆಸಿದ್ದೇನೆ. ನನ್ನ 20 ಎಕರೆ ಜಮೀನಿನಲ್ಲಿ ಕೇವಲ 1/2 ಎಕರೆ ಖಾಲಿ ಇದ್ದ ಜಾಗದಲ್ಲಿ 10 ಅಡಿ X 10 ಅಡಿ ಅಂತರದಲ್ಲಿ 2 ಅಡಿಯಿಂದ 3 1/2 ಅಡಿಯಷ್ಟು ದಪ್ಪವಿದ್ದು ಉಳಿದ ಮಿಶ್ರ ಮರಗಳೊಂದಿಗೆ ಬೆಳೆದ ಮರಗಳು 2 ಅಡಿ ದಪ್ಪ ಇರುವುದು ಕಂಡು ಬಂತು. ಹೆಬ್ಬೇವಿನ ಮರಗಳಲ್ಲಿ ಶೇ.60 ರಷ್ಟು ಮರದ ಭಾಗಗಳು ಉಪಯೋಗಕ್ಕೆ ಬರುವುದಿಲ್ಲ. ಮಾರಿದ ಮರಗಳಿಂದ ನಾವು ಅಂದುಕೊಂಡ ಬೆಲೆ ಸಿಗಲಿಲ್ಲವೆಂದು ನಿರಾಸೆ ಇದ್ದರೂ ಸಹ ವರ್ಷ ವರ್ಷ ಸಸಿಗಳನ್ನು ನೆಡುತ್ತಲೇ ಇದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಹೆಬ್ಬೇವಿನ ಮತ್ತು ಸಿಲ್ವರ್ ಓಕ್ ಮರಗಳನ್ನು ಬೆಳೆಸುವುದು ಲಾಭದಾಯಕವಲ್ಲವೆಂಬ ನಿರ್ಧಾರಕ್ಕೆ ಬಂದಾಯಿತು.

**ಸಾಗುವಾನಿ ಮರದ ಆರ್ಥಿಕತೆ**

1984 ರಲ್ಲಿ ಬದುಗಳ ಮೇಲೆ 20 ಅಡಿ ಅಂತರದಲ್ಲಿ ಇದ್ದ ತೇಗದ ಮರಗಳು 4 ಅಡಿ ದಪ್ಪವಿದ್ದು, 40 ಮರಗಳನ್ನು 2019–20 ರಲ್ಲಿ ಮಾರಾಟ ಮಾಡಿದಾಗ ರೂ. 6 (ಆರು) ಲಕ್ಷ ದೊರೆಯಿತು. ಅಂದರೆ ಪ್ರತಿ ಮರಕ್ಕೆ ರೂ.15,000/– ದೊರೆತಂತಾಯಿತು. ನಂತರ 2021–22 ರಲ್ಲಿ ಈಗಿರುವ ಮರಗಳಲ್ಲಿ, ಮರಗಳನ್ನು ವಿರಳಗೊಳಿಸಲು ಸುಮಾರು 500 ಮರಗಳ ಕಟಾವಿನಿಂದ ಪ್ರತಿ ಘನ ಅಡಿಗೆ ರೂ.800/– ಮಾತ್ರ ದೊರೆಯಿತು. ಅಂದರೆ ಅಂದಿನ ಬೆಲೆಗೆ ಹೋಲಿಸಿದಾಗ ಪ್ರತಿ ಮರಕ್ಕೆ 20 ರಿಂದ 25 ವರ್ಷ ಬೆಳೆಸಿದ ನಂತರ ಕೇವಲ ರೂ.3000/– ದಿಂದ ರೂ.4000/– ಪ್ರತಿ ಮರಕ್ಕೆ ದೊರೆದಂತಾಯಿತು. ಎಲ್ಲಾ ಮರಗಳು ಎದೆ ಮಟ್ಟದಲ್ಲಿ 2 ಅಡಿಯಿಂದ 3 ಅಡಿ ದಪ್ಪವಿದ್ದವು. 12 ಇಂಚು ಸುತ್ತಳತೆಗಿಂತ ಕಡಿಮೆ ಇರುವ ಮರದ ಉಳಿದ ಭಾಗವನ್ನು ಯಾವುದೇ ಬೆಲೆಗೆ ತೆಗೆದುಕೊಳ್ಳುವುದಿಲ್ಲ. ಅವರಿಗೆ ಬೇಡದಿದ್ದ ರೆಂಬೆಗಳನ್ನು ಜಮೀನಿನ ಎಲ್ಲಾ ಕಡೆಗಳಿಂದ ಒಂದು ಕಡೆಗೆ ಸಾಗಿಸಲು ಸಾಕಷ್ಟು ಕೂಲಿ ವ್ಯರ್ಥ, ಸಮಯ ಹಾಳು, ಊರಿನವರನ್ನು ಸೌದೆಗಾದರೂ ತೆಗೆದುಕೊಂಡು ಹೋಗಿ ಎಂದು ಕೇಳಿದರೂ ಯಾರೂ ತೆಗೆದುಕೊಂಡು ಹೋಗುವುದಿಲ್ಲ. ನನಗಂತೂ ಸಾಗುವಾನಿ ಮರಗಳಿಂದ ತುಂಬಾ ಬೆಲೆ ದೊರೆಯುತ್ತದೆಂಬ ಆಸೆ ಇತ್ತು. ಆ ಆಸೆಯೂ ನಿರಾಸೆಯಾಗಿತ್ತು. ಒಂದು ತರಬೇತಿ ಶಿಬಿರದಲ್ಲಿ ಅರಣ್ಯಾಧಿಕಾರಿಗಳು ಹೇಳಿದಂತೆ ರೂ.1 ತೇಗದ ಸಸಿಕೊಂಡು ಬೆಳೆಸಿದಲ್ಲಿ 30 ವರ್ಷಗಳ ನಂತರ ಒಂದು ಲಕ್ಷಗಳನ್ನು ಪಡೆಯಬಹುದುದೆಂದು ಹೇಳಿದ್ದು ಕೇಳಿ ನಂಬಿದ್ದೆ, ಆ ನಂಬಿಕೆಯೂ ಇಂದು ಹುಸಿಯಾಯಿತು.

**ನನ್ನ ಅಭಿಪ್ರಾಯ ಮತ್ತು ಸಲಹೆಗಳು**

ಯಾರಾದರೂ ಸಾಗುವಾನಿ ಬೆಳೆಯಬೇಕೆಂದಿದ್ದರೆ, ನನ್ನ ಅನುಭವದ ಪ್ರಕಾರ ಸಾಗುವಾನಿ ಮರಗಳನ್ನು ಬದುಗಳ ಮೇಲೆ ಬೆಳೆಯುವುದು ಸೂಕ್ತವೆಂದು ಮತ್ತು ನೆಡುತೋಪುಗಳಲ್ಲಿ ಬೆಳೆಯುವುದು ಸೂಕ್ತವಲ್ಲವೆಂದು ತಿಳಿಸಬಯಸುತ್ತೇನೆ. ಈ ಮರಗಳನ್ನು ಸುಮಾರು 30 ವರ್ಷಗಳ ನಂತರ ಕಟಾವು ಮಾಡಿದರೆ ಉತ್ತಮವಾದ ಬೆಲೆ ದೊರೆಯಬಹುದು. ಏಕೆಂದರೆ ಮರಗಳು ದಪ್ಪವಾಗುವುದರಿಂದ ಮತ್ತು ಬಿಳಿಮರದ ಪ್ರಮಾಣ ಕಡಿಮೆಯಾಗುವುದರಿಂದ ನಿಮಗೆ ಉತ್ತಮವಾದ ನೀರಾವರಿ ಸೌಲಭ್ಯವಿದ್ದರೆ ಇಂದಿಗೂ ಸಹ ಅಡಿಕೆ ತೋಟ ಬೆಳೆಯುವುದು ಸೂಕ್ತವಾಗಿದೆ. ನಾನು ಪುನಃ ನನ್ನ ತೋಟದಲ್ಲಿ ಅಡಿಕೆ ಮರಗಳನ್ನು ಬೆಳೆಸಲು ಯೋಚಿಸುತ್ತಿದ್ದೇನೆ. ನನ್ನ ಅನುಭವದ ಪ್ರಕಾರ ಸ್ಥಳಾವಕಾಶವನ್ನು ಬಿಟ್ಟು ಅಂದರೆ 30 ಅಡಿ X 30 ಅಡಿ ಅಂತರದಲ್ಲಿ ಬೆಳೆಯುವುದು ಕ್ಷೇಮಕರ. ಬ್ಲಾಕ್ ನೆಡುತೋಪುಗಳನ್ನು ದಟ್ಟವಾಗಿ ಬೆಳೆಸಿದರೆ ಯಾವುದೇ ಲಾಭ ಉಂಟಾಗಲಾರದು.

ಯಾರೇ ಆದರೂ ಮರಗಳನ್ನು ಜಮೀನಿನ ಸುತ್ತ ಬದುಗಳ ಮೇಲೆ ದೂರ–ದೂರದಲ್ಲಿ ಬೆಳೆಯುವುದು ಮತ್ತು 30 ವರ್ಷಗಳ ನಂತರ ಕಟಾವು ಮಾಡುವುದರಿಂದ ಉತ್ತಮವಾದ ಬೆಲೆಯನ್ನು ಪಡೆಯಬಹುದಾಗಿದೆ.



## ಭಾರತದ ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಸನ್ಮಾನ್ಯ ಶ್ರೀ ಗೋಪಾಲಗೌಡ ಅವರೊಂದಿಗೆ

ದಿನಾಂಕ: 10–05–2022 ರಂದು ಸಂಸ್ಥೆಯ ಪದಾಧಿಕಾರಿಗಳು ಸನ್ಮಾನ್ಯ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಗೋಪಾಲಗೌಡ ಅವರೊಂದಿಗೆ ರೈತರಿಗೆ ಸಂಬಂಧಿಸಿದ ಹಲವಾರು ವಿಷಯಗಳ ಕುರಿತು ಚರ್ಚಿಸಲಾಯಿತು.

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಡಾ. ಎಸ್.ಸಿ.ವಿ. ರೆಡ್ಡಿ, ಶ್ರೀ ಆರ್. ಆಂಜನೇಯ ರೆಡ್ಡಿ, ಶ್ರೀ ಎ. ಅಶ್ವಥಯ್ಯ, ಶ್ರೀ ಮಲ್ಲೇಶ್ ಲಿಂಗಾಚಾರ್ ಮತ್ತು ಸಂಸ್ಥೆಯ ಸದಸ್ಯರಾದ ಶ್ರೀ ಕೆ.ಎಸ್. ಆನಂದ್ ಇವರು ಸನ್ಮಾನ್ಯ ನ್ಯಾಯಮೂರ್ತಿಗಳನ್ನು ಭೇಟಿ ಮಾಡಿ ಸಂಸ್ಥೆಯ ದ್ಯೇಯೋದ್ದೇಶಗಳ ಬಗ್ಗೆ ವಿವರಿಸಿದರು.

ರಾಜ್ಯದಲ್ಲಿ ರೈತರು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ಬಗ್ಗೆ ಡಾ. ಎಸ್.ಸಿ.ವಿ. ರೆಡ್ಡಿಯವರು ಸುದೀರ್ಘವಾಗಿ ತಿಳಿಸಿದರು. ಈ ಸಮಸ್ಯೆಗಳಲ್ಲಿ ಬಹು ಮುಖ್ಯವಾದ ಸಮಸ್ಯೆಯೆಂದರೆ ಕಂದಾಯ ಇಲಾಖೆಯ ವಿಷಯಗಳು ಮತ್ತು ಇಲಾಖೆಯಿಂದ ರೈತರಿಗುಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದರು. ಈ ಸಮಸ್ಯೆಗಳನ್ನು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ ವತಿಯಿಂದ ಯಾವ ರೀತಿಯಲ್ಲಿ ನಿವಾರಿಸಬಹುದೆಂದು ಸಹ ತಿಳಿಸಿದರು. ರೈತರ ಸಮಸ್ಯೆಗಳು ಅನೇಕ ತೆರನಾಗಿದ್ದು ಅವುಗಳನ್ನು ನಿವಾರಿಸುವಲ್ಲಿ ಸಂಸ್ಥೆಯು ಕೈಗೊಂಡಿರುವ ವಿಚಾರಗಳ ಬಗ್ಗೆ ಸನ್ಮಾನ್ಯ ನ್ಯಾಯಮೂರ್ತಿಗಳು ಮೆಚ್ಚುಗೆ ವ್ಯಕ್ತಪಡಿಸಿ, ಸಕಾರಾತ್ಮಕವಾಗಿ ಸ್ಪಂದಿಸಿದರು.

ಸನ್ಮಾನ್ಯ ನ್ಯಾಯಮೂರ್ತಿಗಳು ಸಾಮಾನ್ಯವಾಗಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ವಿಶೇಷವಾಗಿ ಕೃಷಿ ಮಾಡುತ್ತಿರುವ ರೈತರ ಸಮಸ್ಯೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವವರು ಅವರ ಮನೋಭಾವನೆಯನ್ನು ರೈತಸ್ನೇಹಿಯಾಗಿರುವಂತೆ ಅರಿವು ಮೂಢಿಸುವ ಅವಶ್ಯಕತೆಯ ಬಗ್ಗೆ ಯೋಚಿಸಬೇಕೆಂದು ತಿಳಿಸಿರುವರು.

ಸುದೀರ್ಘವಾದ ಚರ್ಚೆಯ ನಂತರ, ರೈತರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಎಲ್ಲಾ ಭಾಗೀದಾರರುಗಳನ್ನೊಳಗೊಂಡಂತೆ ಒಂದು ಕಾರ್ಯಾಗಾರವನ್ನು ಈ ಕೆಳಗಿನ ವಿಚಾರಗಳನ್ನೊಳಗೊಂಡಂತೆ ನಡೆಸಿ ಕಂದಾಯ ಮತ್ತು ಕಾನೂನಿನ ವಿಚಾರಗಳ ಬಗ್ಗೆ ಒಮ್ಮತದ ಅಭಿಪ್ರಾಯ ಪಡೆಯುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

ಕರ್ನಾಟಕದ ನ್ಯಾಯಾಲಯದಲ್ಲಿ ಬಾಕಿ ಇರುವ ಸಿವಿಲ್ ವಿಚಾರಗಳ ಬಗೆಗಿನ ಮೊಕದ್ದಮೆಗಳನ್ನು ತ್ವರಿತವಾಗಿ ತೀರ್ಮಾನಿಸುವ ಕಾರ್ಯಾಗಾರ ಏರ್ಪಡಿಸಲು ತೀರ್ಮಾನಿಸಲಾಯಿತು.

ಉದ್ದೇಶಿಸಿರುವ ಕಾರ್ಯಾಗಾರದಲ್ಲಿ, ಕೃಷಿ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳ ಬಾಕಿ ಇರುವ ಮೊಕದ್ದಮೆಗಳ ಕುರಿತಂತೆ, ರೈತ ಅನುಭವ ಮತ್ತು ಪರಿಹಾರೋಪಾಯಗಳನ್ನು ಗುರುತಿಸುವುದು; ಕಂದಾಯ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಇರುವ ಪ್ರಾಧಿಕಾರಗಳು/ ಅಧಿಕಾರ ಮತ್ತು ಸರಳೀಕರಣ ಹಾಗೂ ಕಾನೂನು ಪರಿಣತರಿಂದ ದಾವೆಗಳನ್ನು ಆದ್ಯತೆ ಮತ್ತು ಶೀಘ್ರವಾಗಿ ವಿಲೇವಾರಿ ಮಾಡಲು ಮಾರ್ಗಸೂಚಿ ಹಾಗೂ ತಿದ್ದುಪಡಿಗಳು ಕುರಿತಂತೆ ಚರ್ಚೆಮಾಡಲಾಗುವುದು. ಈ ಕಾರ್ಯಗಾರದಿಂದ ಮೂಡಿ ಬರುವ ಶಿಫಾರಸ್ಸುಗಳನ್ನು ಕರ್ನಾಟಕ ಸರ್ಕಾರಕ್ಕೆ ಕಳುಹಿಸಿ, ಅನುಷ್ಠಾನಕ್ಕೆ ಕ್ರಮಕೈಗೊಳ್ಳಲು ಕೋರಲಾಗುವುದು.



## ಏಪ್ರಿಲ್–ಜೂನ್ 2022ರ ಪ್ರಮುಖ ದಿನಗಳು ಮತ್ತು ಧ್ಯೇಯವಾಕ್ಯ

1. 7ನೇ ಏಪ್ರಿಲ್– ವಿಶ್ವ ಆರೋಗ್ಯ ದಿನ – ಆರೋಗ್ಯಕರ ಗ್ರಹದ ದೃಷ್ಟಿಗಳು ಮತ್ತು ಧ್ವನಿಗಳು
2. 22ನೇ ಏಪ್ರಿಲ್– ವಿಶ್ವ ಭೂ ದಿನ – ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಸುಸ್ಥಿರವಾಗಿ ಬದುಕುವುದು
3. 20ನೇ ಮೇ – ವಿಶ್ವಜೀವ ವೈವಿದ್ಯತೆ ದಿನ – ಎಲ್ಲಾ ಜೀವನಕ್ಕೆ ಹಂಚಿಕೆಯ ಭವಿಷ್ಯವನ್ನು ನಿರ್ಮಿಸುವುದು
4. 5ನೇ ಜೂನ್– ವಿಶ್ವ ಪರಿಸರ ದಿನ – ಒಂದೇ ಭೂಮಿ
5. 7ನೇ ಜೂನ್– ವಿಶ್ವ ಆಹಾರ ಭದ್ರತೆ ದಿನ – ಸುರಕ್ಷಿತ ಆಹಾರ, ಉತ್ತಮ ಆರೋಗ್ಯ
6. 17ನೇ ಜೂನ್–ವಿಶ್ವ ಬರ ಮತ್ತು ಮರುಭೂಮಿ ತಡೆ ದಿನ – ಬರದೊಟ್ಟಿಗೆ ಮೇಲೆಳುವುದು



# ಏಪ್ರಿಲ್ – ಜೂನ್ 2022ರ ಮಾಹೆಗಳಲ್ಲಿ ನಡೆದ ಕಾರ್ಯಕ್ರಮಗಳು

**ಕಾರ್ಯದರ್ಶಿ: ಹೆಚ್.ಜಿ. ಶಿವಾನಂದಮೂರ್ತಿ**, ಭಾ.ಅ.ಸೇ (ನಿ) ಮೊ: 94481 26246

1. ದಿ:11–04–2022 ರಂದು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿ ಮತ್ತು ಸದಸ್ಯರು ಶ್ರೀ ಆರ್.ಕೆ. ಸಿಂಗ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಇವರನ್ನು ಭೇಟಿ ಮಾಡಿ ಅಭಿನಂದಿಸಲಾಯಿತು.

2. ದಿ:11–04–2022 ರಂದು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿ ಮತ್ತು ಸದಸ್ಯರು ಶ್ರೀಮತಿ ರಾಧಾದೇವಿ, ಭಾ.ಅ.ಸೇ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಇವರನ್ನು ಭೇಟಿ ಮಾಡಿ ಅಭಿನಂದಿಸಲಾಯಿತು.

3. ದಿ:18–04–2022ರಂದು ಸಂಸ್ಥೆಯ ಅಧ್ಯಕ್ಷರು, ಜಂಟಿ ಕಾರ್ಯದರ್ಶಿ, ಖಜಾಂಚಿ ಮತ್ತು ಸದಸ್ಯರು ಕೆ.ಎಸ್.ಡಿ.ಎಲ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮಹೇಶ್ ಸಿರೂರ್, ಭಾ.ಅ.ಸೇ ಇವರನ್ನು ಭೇಟಿ ಮಾಡಿ ಕೃಷಿಅರಣ್ಯದಲ್ಲಿ ಬೆಳೆದ ಶ್ರೀಗಂಧದ ಮರಗಳ ಸಂಗ್ರಹಣೆ ಇತ್ಯಾದಿ ವಿಷಯಗಳ ಕುರಿತು ಚರ್ಚಿಸಲಾಯಿತು.

4. ದಿ:21–04–2022 ರಂದು ಕಾರ್ಯದರ್ಶಿಯವರು ಅರಸೀಕೆರೆ ತಾಲ್ಲೂಕಿನ ಮಾಡಾಳು ಗ್ರಾಮದ ಶ್ರೀ ನಾಗರಾಜುರವರ ಮಹಾಗನಿ ತೋಟಕ್ಕೆ ಭೇಟಿ ನೀಡಿ ಮಹಾಗನಿ ಮರಗಳ ವಯಸ್ಸು, ಗಾತ್ರ, ಬೆಳವಣಿಗೆ, ಮಾರುಕಟ್ಟೆ ಇತ್ಯಾದಿ ವಿಚಾರಗಳನ್ನು ಕುರಿತಂತೆ ವಿಚಾರ ವಿನಿಮಯ ಮಾಡಲಾಯಿತು.

5. ದಿ:26–04–2022 ರಂದು ಬೆಳಿಗ್ಗೆ ಕಾನೂನು ಮತ್ತು ನೀತಿ ನಿರೂಪಣಾ ಉಪಸಮಿತಿ ಸಭೆಯನ್ನು ಡಾ. ಎಸ್.ಸಿ.ವಿ ರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಹಾಗೂ ಮಧ್ಯಾಹ್ನ ಜೇನು ಉಪಸಮಿತಿ ಸಭೆಯನ್ನು ಶ್ರೀ ಎಸ್.ಎಂ. ಶಾಂತವೀರಯ್ಯ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

6. ದಿ: 01–05–2022 ರಂದು ಪೂರ್ವಾಹ್ನ ಭಕ್ತರಹಳ್ಳಿಯ ಶ್ರೀ ಶ್ಯಾಮಸುಂದರ್ ಅವರ ಕೃಷಿ ಕ್ಷೇತ್ರಕ್ಕೆ ಭೇಟಿ ನೀಡಲಾಯಿತು. ಅಲ್ಲಿ ಹೆಬ್ಬೇವು ಮತ್ತು ಶ್ರೀಗಂಧ ಬೆಳೆಯ ಪ್ರಾತ್ಯಕ್ಷಿಕೆ ನಡೆಸಿ ರೈತರೊಡನೆ ಚರ್ಚಿಸಲಾಯಿತು.

7. ದಿ: 01–05–2022 ರಂದು ಪೂರ್ವಾಹ್ನ ಪ್ರಾತ್ಯಕ್ಷಿಕೆ ಹಾಗೂ ಚರ್ಚೆಯಲ್ಲಿ ಅಜೀವ ಸದಸ್ಯರಾದ ಹಾಗೂ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಎನ್.ಸಿ. ಪಟೇಲ್ ರವರು ಜನವರಿ–ಮಾರ್ಚಿ 2022ರ ತ್ರೈಮಾಸಿಕ ಕೃಷಿವನ ವಾರ್ತಾಪತ್ರಿಕೆಯನ್ನು ಬಿಡುಗಡೆ ಮಾಡಿಕೊಟ್ಟರು. ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಕೃಷಿಅರಣ್ಯದ ಬಗ್ಗೆ ಮಾಹಿತಿ ನೀಡಿದರು.

8. ದಿ: 01–05–2022 ರಂದು ಮಧ್ಯಾಹ್ನ ಚಿಕ್ಕಬಳ್ಳಾಪುರ ಜಿಲ್ಲೆ, ನಯನಹಳ್ಳಿಯಲ್ಲಿರುವ ಶ್ರೀ ಆರ್. ಆಂಜನೇಯರೆಡ್ಡಿಯವರ ಪರಮಶಿವಯ್ಯ ಗ್ರಂಥಾಲಯದ ಆವರಣದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

9. ದಿ:10–05–2022 ರಂದು ಸಂಸ್ಥೆಯ ಕಾನೂನು ಮತ್ತು ನೀತಿ ನಿರೂಪಣೆ ಉಪ ಸಮಿತಿಯ ಅಧ್ಯಕ್ಷರಾದ ಡಾ. ಎಸ್.ಸಿ.ವಿ. ರೆಡ್ಡಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಗೋಪಾಲಗೌಡ ಅವರೊಡನೆ ಕೃಷಿಅರಣ್ಯ ನೀತಿ ಸಮಸ್ಯೆಗಳನ್ನು (Policy Issues) ಕುರಿತು ಚರ್ಚಿಸಲಾಯಿತು.

10. ದಿ:11–05–2022 ರಂದು ಶಿವಮೊಗ್ಗದಲ್ಲಿ ಶ್ರೀ ಎ.ಎಂ. ಅಣ್ಣಯ್ಯನವರು ಶಿವಮೊಗ್ಗ ವೃತ್ತದ ಅರಣ್ಯಾಧಿಕಾರಿಗಳಿಗೆ ಅರಣ್ಯ ಕಾನೂನು ಹಾಗೂ ಕೃಷಿಅರಣ್ಯದ ಬಗ್ಗೆ ಸಂಸ್ಥೆಯ ಹಿಂದಿನ ಕಾರ್ಯದರ್ಶಿಗಳು ತರಬೇತಿ ಮತ್ತು ವಿಚಾರ ವಿನಿಮಯ ಮಾಡಿದರು.

11. ದಿ:11–05–2022 ರಂದು ಸಂಜೆ ಶಿವಮೊಗ್ಗದಲ್ಲಿ ಶ್ರೀ ಎ.ಎಂ. ಅಣ್ಣಯ್ಯನವರು ರೋಟರಿ ಸಂಸ್ಥೆಯ ಸದಸ್ಯರಿಗೆ ಅರಣ್ಯ, ವನ್ಯಜೀವಿ, ಪರಿಸರ ಹಾಗೂ ಕೃಷಿಅರಣ್ಯದ ಬಗ್ಗೆ ಉಪನ್ಯಾಸ ಮತ್ತು ಪ್ರಶ್ನೋತ್ತರ ಕಾರ್ಯಕ್ರಮ ನಡೆಸಿಕೊಟ್ಟರು.

12. ದಿ:20–05–2022 ರಂದು ದಾರವಾಡದಲ್ಲಿ ಶ್ರೀ ಎ.ಎಂ. ಅಣ್ಣಯ್ಯನವರು ಜಲಸಂನ್ಮೂಲ ಇಲಾಖೆಯ 'ಜಲ–ನೆಲ ನಿರ್ವಹಣೆ ಸಂಸ್ಥೆ'ಯಲ್ಲಿ ಪ್ರೊಬೇಷನರಿ ಇಂಜಿನಿಯರ್‌ಗಳಿಗೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ (CADA) ನೀರು ಬಳಕೆದಾರರ ಸಹಕಾರ ಸಂಘಗಳ ನಿರ್ವಹಣೆ ಹಾಗೂ ಅಚ್ಚುಕಟ್ಟು ಪ್ರದೇಶಗಳಲ್ಲಿ ಕೃಷಿಅರಣ್ಯದ ಬಗ್ಗೆ ತರಬೇತಿ ನೀಡಲಾಯಿತು.

13. ದಿ:20–05–2022 ರಂದು ಪೂರ್ವಾಹ್ನ WALMI ಯಲ್ಲಿ ತರಬೇತಿಯಲ್ಲಿರುವ ವಲಯ ಅರಣ್ಯಾಧಿಕಾರಿಗಳ ತಂಡಕ್ಕೆ 'ಜಲ, ಜಲಾನಯನ ಪ್ರದೇಶ ಹಾಗೂ ಅರಣ್ಯ ಕಾನೂನು ಹಾಗೂ ಕೃಷಿ ಅರಣ್ಯ'ದ ಬಗ್ಗೆ ಉಪನ್ಯಾಸ ಹಾಗೂ ಪ್ರಶ್ನೋತ್ತರ ಕಾರ್ಯಕ್ರಮವನ್ನು ಶ್ರೀ ಎ.ಎಂ. ಅಣ್ಣಯ್ಯನವರು ನಡೆಸಿ ಕೊಟ್ಟರು.

14. ದಿ:20–05–2022 ರಂದು ಮಧ್ಯಾಹ್ನ ಶ್ರೀ ಎ.ಎಂ. ಅಣ್ಣಯ್ಯನವರು ತರಬೇತಿಯಲ್ಲಿರುವ ವಲಯ ಅರಣ್ಯಾಧಿಕಾರಿಗಳ ಜೂನಿಯರ್ ಬ್ಯಾಚ್‌ನೊಡನೆ ಅರಣ್ಯ ಇಲಾಖೆಯಲ್ಲಿ ವಲಯ ಅರಣ್ಯಾಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಲಾಯಿತು.

15. ದಿ:21–05–2022 ರಂದು ಶ್ರೀ ಎ.ಎಂ. ಅಣ್ಣಯ್ಯನವರು ಉತ್ತರಕನ್ನಡ ಜಿಲ್ಲೆಯಲ್ಲಿ ತಟ್ಟಿಹಳ್ಳ ಅರಣ್ಯ ತರಬೇತಿ ಕೇಂದ್ರದಲ್ಲಿ ಸೇವೆಯಲ್ಲಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ 'ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳು ಅರಣ್ಯ ಹಾಗೂ ಅರಣ್ಯ ಭೂಮಿ ಸಂರಕ್ಷಣೆ' ಕುರಿತು ನೀಡಿರುವ ತೀರ್ಪುಗಳ ಬಗ್ಗೆ ಚರ್ಚಿಸಲಾಯಿತು. ಹಾಗೂ ಕೃಷಿಅರಣ್ಯದ ಬಗ್ಗೆ ಮಾಹಿತಿ ನೀಡಲಾಯಿತು.

16. ದಿ:24–05–2022 ರಂದು ಡಾ. ಎಸ್. ರಾಜೇಂದ್ರಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಮತ್ತು ಪ್ರಚಾರ ಉಪ ಸಮಿತಿಯ ಸಭೆಯನ್ನು ಕುಲಪತಿಗಳ ಸಭಾಂಗಣ, ಜಿಕೆವಿಕೆ, ಯುಎಎಸ್ ಬೆಂಗಳೂರು ಇಲ್ಲಿ ನಡೆಸಲಾಯಿತು.

17. ದಿ:06–06–2022ರಂದು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ ಇವರೊಡನೆ ಸಂಸ್ಥೆಯ ಸಹಯೋಗದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದ ವರ್ಷದಲ್ಲಿ ಅಮೃತ ಮಹೋತ್ಸವದ ಸಂದರ್ಭದಲ್ಲಿ 75 ಜಾತಿಯ ಸಸಿಗಳನ್ನು ನೆಡುವ ಮೂಲಕ 'ವಿಶ್ವ ಪರಿಸರ ದಿನಾಚರಣೆ'ಯನ್ನು ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು, ಆಹ್ವಾನಿತರು, ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳೊಡನೆ ಸೇರಿ ಆಚರಿಸಲಾಯಿತು.

   ಕೃಷಿ ವಿಶ್ವವಿದ್ಯಾನಿಲಯದ ಬೊಟಾನಿಕಲ್ ಗಾರ್ಡನ್‌ನಲ್ಲಿ ಅಳವಡಿಸಿರುವ ಕ್ಯೂ ಆರ್ ಕೋಡ್ ಅನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಯ್ ಮಿಶ್ರ ಅವರಿಂದ ಉದ್ಘಾಟನೆ ಮಾಡಿಸಲಾಯಿತು. ನಂತರ ವಿಶ್ವ ಪರಿಸರ ದಿನಾಚರಣೆಯ ಮಹತ್ವದ ಕುರಿತು ಸಂಸ್ಥೆಯ ಅಧ್ಯಕ್ಷರು ಮಾತನಾಡಿದರು. ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಸಂಸ್ಥೆಯ ಉಪಾಧ್ಯಕ್ಷರಾದ ಡಾ.ಎಸ್. ರಾಜೇಂದ್ರ ಪ್ರಸಾದ್ ರವರು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಸುಂದರ ಪರಿಸರದ



ವಿಶ್ವ ಪರಿಸರ ದಿನಾಚರಣೆ – 2022 (ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು)

ನಿರ್ವಹಣೆಯ ಬಗ್ಗೆ ವಿವರಿಸಿದರು ಹಾಗೂ ಪರಿಸರ ದಿನಾಚರಣೆಯ ಮಹತ್ವದ ಕುರಿತು ಮಾತನಾಡಿ, ಮುಂದಿನ ಪೀಳಿಗೆಗೆ ಮಾಲಿನ್ಯ ರಹಿತ ಪರಿಸರ ನೀಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ತಿಳಿಸಿದರು.

ಸಂಸ್ಥೆಯ ಅಜೀವ ಸದಸ್ಯರು ಹಾಗೂ ಖಾಯಂ ಆಹ್ವಾನಿತರಾದ ಶ್ರೀ ಎ.ಎಂ. ಅಣ್ಣಯ್ಯರವರು ಮಾತನಾಡಿ, ಅಂದಿನ ಹಾಗೂ ಇಂದಿನ ಪರಿಸರ ವ್ಯವಸ್ಥೆ, ಹವಾಮಾನ ಬದಲಾವಣೆಗೆ ಮಾನವ ಹೇಗೆ ಕಾರಣೀಭೂತನಾಗಿದ್ದಾನೆಂದು ವಿವರಿಸಿ, ನಮ್ಮ ಸುತ್ತಲಿನ ಪರಿಸರವನ್ನು ಉತ್ತಮ ಸ್ಥಿತಿಯಲ್ಲಿಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

18 ದಿ: 06–06–2022ರಂದು ಕುಲಪತಿಗಳ ಸಭಾಂಗಣ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ ಬೆಂಗಳೂರು ಇಲ್ಲಿ ಶ್ರೀ ಅಜಯ್ ಮಿಶ್ರ ರವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

19. ದಿ: 22–06–2022 ರಂದು ಕರ್ನಾಟಕ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಬೆಂಗಳೂರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು ಮತ್ತು ಸುಮಂಗಲಿ ಸೇವಾ ಆಶ್ರಮ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ 2 ದಿನಗಳ "ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ" ದಲ್ಲಿ ಸಮುದಾಯ ಆಧಾರಿತ ಬದಲಾಣೆ ಮತ್ತು ಸ್ವಯಂಸೇವಾ ಸಂಸ್ಥೆಗಳು ಸದರಿ ಕಾರ್ಯಾಗಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಯವರು ಉದ್ಘಾಟಿಸಿದರು. ಕೇಂದ್ರ ಸರ್ಕಾರದ ಕೃಷಿ ರಾಜ್ಯ ಸಚಿವರಾದ ಕುಮಾರಿ ಶೋಭಾ ಕರಂದ್ಲಾಜೆ ಇವರು ಉಪಸ್ಥಿತರಿದ್ದರು. ಈ ಗೋಷ್ಠಿಯಲ್ಲಿ ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ ಬೆಂಗಳೂರಿನ ಕಾರ್ಯಕಾರಿ ಮಂಡಳಿಯ ಸದಸ್ಯರು ಹಾಗೂ ಮಾನ್ಯ ಕೃಷಿ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳಾದ ಡಾ. ಎ.ಬಿ. ಪಾಟೀಲ ಇವರು 'ಕೃಷಿಅರಣ್ಯ ಹಾಗೂ ಪರಿಸರ' ಕುರಿತು ವಿಷಯ ಮಂಡನೆ ಮಾಡಿದರು. ಸಮುದಾಯಗಳು ಯಾವ ರೀತಿ ಸರ್ಕಾರದ ವಿವಿಧ ಯೋಜನೆಗಳಲ್ಲಿ ಭಾಗವಹಿಸಿ ಕೃಷಿಅರಣ್ಯ ಕ್ಷೇತ್ರವನ್ನು ಹಾಗೂ ಕೃಷಿಅರಣ್ಯ ಆಧಾರಿತ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಮಣ್ಣಿನ ಫಲವತ್ತತೆ, ಉತ್ಪಾದಕತೆಯೊಂದಿಗೆ ಎಕರೆವಾರು ಇಳುವರಿಯನ್ನು ಹೆಚ್ಚಿಸುವುದು, ರೈತರ ಆಧಾಯವನ್ನು ಅಧಿಕಗೊಳಿಸುವುದು ಹಾಗೂ ಪರಿಸರದ ರಕ್ಷಣೆಯಾಗುವುದನ್ನು ಪಿ.ಪಿ.ಟಿ ಮಂಡನೆ ಮೂಲಕ ವಿವರಿಸಿದರು.

20. ಜೂನ್ 23, 27, 28 ಹಾಗೂ 29ರಂದು ಅಜೀವ ಸದಸ್ಯರಾದ ಶ್ರೀ ಎ.ಎಂ. ಅಣ್ಣಯ್ಯನವರು ಚಾಮರಾಜನಗರ, ಮೈಸೂರು, ಬಂಡೀಪುರ, ಹಾಗೂ ಕೊಡಗು ವೃತ್ತಗಳಲ್ಲಿ ಅರಣ್ಯಾಧಿಕಾರಿಗಳಿಗೆ "ಅರಣ್ಯ ಭೂಮಿ ರಕ್ಷಣೆ ಮತ್ತು ನ್ಯಾಯಾಲಯದ ತೀರ್ಪುಗಳ" ಬಗ್ಗೆ ಕಾರ್ಯಾಗಾರ ನಡೆಸಿ ಕೃಷಿಅರಣ್ಯದ ಪ್ರಾಮುಖ್ಯತೆಯನ್ನು ಸಹ ತಿಳಿಸಿರುತ್ತಾರೆ.

21. ದಿ: 28–06–2022ರಂದು ಸಂಸ್ಥೆಯ ಅಧ್ಯಕ್ಷರು ಮತ್ತು ಜೇನು ಉಪಸಮಿತಿ ಸದಸ್ಯರುಗಳು ಬೆಂಗಳೂರಿನ ಲಾಲ್‌ಬಾಗ್‌ಗೆ ಭೇಟಿ ನೀಡಿ ಹೆಚ್ಚುವರಿ ತೋಟಗಾರಿಕೆ ನಿರ್ದೇಶಕರು ಇವರೊಡನೆ ಜೇನು ಸಾಕಾಣಿಕೆ, ತರಬೇತಿ, ಅಭಿವೃದ್ಧಿ ಮತ್ತು ಉತ್ತೇಜನ ಇತರೆ ವಿಷಯಗಳ ಕುರಿತು ಚರ್ಚಿಸಲಾಯಿತು.

22. ದಿ: 29–06–2022ರಂದು ಸನ್ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಅಂತರರಾಷ್ಟ್ರೀಯ ಕೃಷಿ ಅನುಸಂಧಾನ ಸಂಸ್ಥೆಗಳ ಒಕ್ಕೂಟ (CGIAR) ಹಾಗೂ ಅಂತರರಾಷ್ಟ್ರೀಯ ಅರಣ್ಯ ಸಂಶೋಧನೆ ಮತ್ತು ಕೃಷಿಅರಣ್ಯ ಸಂಸ್ಥೆಗಳೊಂದಿಗೆ ನಡೆದ ಸಭೆಯಲ್ಲಿ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸಂಸ್ಥೆಯ ಸದಸ್ಯರುಗಳು ಭಾಗವಹಿಸಿದ್ದರು. ಸಂಸ್ಥೆಯ ಮುಖ್ಯಸ್ಥರು ಹಾಗೂ ಪದಾಧಿಕಾರಿಗಳು ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದರಿಂದ ಅಂತರರಾಷ್ಟ್ರೀಯ ಮಟ್ಟದ ಕೃಷಿಅರಣ್ಯ ಸಂಶೋಧನಾ ವಿಚಾರಗಳನ್ನು ರಾಜ್ಯದ ರೈತರ ಶ್ರೇಯೋಭಿವೃದ್ಧಿಗೆ ಬಳಸಿಕೊಳ್ಳುವುದರಿಂದ ರೈತರ ಜೀವನ ಶೈಲಿ ಅಭಿವೃದ್ಧಿಯಾಗುವುದೆಂದು ತಿಳಿಸಿರುವರು. ಇಷ್ಟೇ ಅಲ್ಲದೆ ಹವಾಮಾನ ಬದಲಾವಣೆಯಿಂದ ಉಂಟಾಗಿರುವ ಸಮಸ್ಯೆಗಳನ್ನು ಕಡಿಮೆಗೊಳಿಸಿ, ಜಾಗತಿಕ ಉಷ್ಣತೆಯನ್ನು $1^0$ಸೆಲ್ಸಿಯಸ್‌ನಷ್ಟು ಕಡಿಮೆಗೊಳಿಸಲು ಕೃಷಿಅರಣ್ಯಗಳು ಸಹಾಯಕವಾಗಲಿದೆಯೆಂದು, ಜೀವವೈವಿಧ್ಯತೆ ಸಂರಕ್ಷಿಸಲು ತನ್ಮೂಲಕ ಕೃಷಿ ಭೂಮಿ ಬರಡಾಗುವುದನ್ನು ತಡೆಯಲು ಮರ ಆಧಾರಿತ ಆಹಾರ ಪದ್ಧತಿ ವೃದ್ಧಿಸಲು, ಹಾಗೂ ಇತರೆ ಹಸಿರು ತಾಂತ್ರಿಕತೆಯನ್ನು ಬಳಸುವುದರಿಂದ ಮಣ್ಣು ಅವನತಿ ಹೊಂದುವುದನ್ನು ತಡೆಯಲು, ಆಹಾರ ಉತ್ಪಾದನೆಯಲ್ಲಿ ದೇಶೀ ಆಹಾರ ಮತ್ತು ಸಾವಯವ ಉತ್ಪಾದನೆಗೆ ಅವಶ್ಯಕವಾದ ಅಂತರರಾಷ್ಟ್ರೀಯ ಮಟ್ಟದ ತಾಂತ್ರಿಕತೆಯನ್ನು ಒದಗಿಸಲು ಸಾಧ್ಯವಾಗುವುದೆಂದು ಚರ್ಚಿಸಲಾಯಿತು.

ಅಂತರರಾಷ್ಟ್ರೀಯ ಕೃಷಿಅರಣ್ಯ ಸಂಸ್ಥೆಯನ್ನು ಬೆಂಗಳೂರು ಕೃ.ವಿ.ವಿ.ಯಲ್ಲಿ ಅಥವಾ ಆಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡಿ ಅಂತರರಾಷ್ಟ್ರೀಯ ಕೃಷಿಅರಣ್ಯ ಸಂಶೋಧನಾ ಸಂಸ್ಥೆ ಸ್ಥಾಪಿಸುವುದರಿಂದ ರಾಜ್ಯದ ಕೃಷಿಅರಣ್ಯ ರೈತರಿಗೆ ಲಾಭದಾಯಕವಾಗುವುದೆಂದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷರು ಅಭಿಪ್ರಾಯಪಟ್ಟರು.

# ಕೃಷಿಅರಣ್ಯ ಪ್ರಾಥಮಿಕ ಮಾಹಿತಿ

**ಶಿವರಾಜು ಎನ್**, ಉಪ ಅರಣ್ಯ ಸಂರಕ್ಷಣಾಧಿಕಾರಿ (ನಿವೃತ್ತ), ಮೊ: 94826 47448

**1. ಕೃಷಿಅರಣ್ಯ ಎಂದರೇನು?**

ಕೃಷಿಅರಣ್ಯ ಎಂದರೆ ಕೃಷಿ ಬೆಳೆಗಳ ಜೊತೆಗೆ ಅರಣ್ಯದ ಮರಗಿಡಗಳನ್ನು ಬೆಳೆಯುವ ಪದ್ಧತಿಯನ್ನು ಕೃಷಿಅರಣ್ಯ ಅಥವಾ ಕ್ಷೇತ್ರಅರಣ್ಯ ಎಂದು ಕರೆಯಬಹುದು.

**2. ಕೃಷಿಅರಣ್ಯದಿಂದ ಬರುವ ಪ್ರಯೋಜನಗಳಾವುವು?**

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ರೈತರು ಕೃಷಿಯಲ್ಲಿ ನಷ್ಟವುಂಟಾಗುತ್ತಿದೆ ಎಂದು ಹೇಳುವುದನ್ನು ನಾವು ಕೇಳಿರಬಹುದು. ಕೃಷಿ ಲಾಭದಾಯಕ ಅಲ್ಲ. ಕೃಷಿಯಲ್ಲಿ ಅನೇಕ ಸಮಸ್ಯೆಗಳಿವೆ ಎನ್ನುವರಿದ್ದಾರೆ.

- ಸಕಾಲದಲ್ಲಿ ಮಳೆ ಬಾರದಿರುವುದು. ಅತಿವೃಷ್ಟಿ ಇಲ್ಲವೇ ಅನಾವೃಷ್ಟಿ (ಬರ).
- ಕೃಷಿ ಕೂಲಿ ಕಾರ್ಮಿಕರ ಸಮಸ್ಯೆ, ವಿದ್ಯುತ್ ಸಮಸ್ಯೆ
- ಏಕ ಬೆಳೆ ಪದ್ಧತಿಯಲ್ಲಿ ಕಾಣಿಸುವ ರೋಗರುಜಿನಗಳು/ ಕೀಟಗಳ ಹಾವಳಿ
- ಅಧಿಕ ಪ್ರಮಾಣದಲ್ಲಿ ರಸಗೊಬ್ಬರಗಳ ಬಳಕೆಯಿಂದ ಮಣ್ಣಿನ ಆರೋಗ್ಯ ಕ್ಷೀಣಿಸುವುದು
- ಇಳುವರಿ ಕಡಿಮೆ, ಕೃಷಿ ಬೆಳೆಗಳಿಗೆ ಸರಿಯಾದ ಬೆಲೆ ಸಿಗದಿರುವುದು

ಒಟ್ಟಾರೆ ಹೇಳುವುದಾದರೆ ಮಳೆ ಆಧಾರಿತ ಕೃಷಿಯಲ್ಲಿ ಅನಿಶ್ಚಿತತೆ (ಸಮಸ್ಯೆ) ಹೆಚ್ಚು, ಮಳೆಯ ಅನಿಶ್ಚಿತತೆಯಿಂದ ಬೆಳೆ ನಷ್ಟ ಸಂಭವನೀಯತೆ ಹೆಚ್ಚು.

ಈ ಹಿನ್ನೆಲೆಯಲ್ಲಿ ಕೃಷಿ ವಿವಿಗಳು, ಕೃಷಿ ಇಲಾಖೆ ಹಾಗೂ ಸರ್ಕಾರಗಳು ಸಮಗ್ರ ಕೃಷಿ ಪದ್ಧತಿ, ಮಿಶ್ರ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡುತ್ತಿದ್ದಾರೆ.

ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳ ಅಧಿಕ ಬಳಕೆ, ಕೀಟಗಳನ್ನು ನಿಯಂತ್ರಿಸಲು ಹೆಚ್ಚು ಹೆಚ್ಚು ಕೀಟ ನಾಶಕಗಳ ಬಳಕೆ, ಕಳೆ ನಾಶಕಗಳ ಬಳಕೆಯಿಂದ ಕಲುಷಿತ ಆಹಾರ ಹಾಗೂ ಪರಿಸರದಲ್ಲಿ ಅನೇಕ ವ್ಯತ್ಯಯಗಳನ್ನು ಕಾಣುತ್ತಿದ್ದೇವೆ. ಇಂತಹ ತೊಂದರೆ/ಅನಾಹುತಗಳನ್ನು ಕಡಿಮೆ ಮಾಡಲು ಸಮಗ್ರ ಕೃಷಿ ಪದ್ಧತಿ, ಸಾವಯವ ಕೃಷಿ ಪದ್ಧತಿಗಳು ಹೆಚ್ಚು ಪರಿಣಾಮಕಾರಿ. ಬೆಳೆ ಅನಿಶ್ಚಿತತೆಯನ್ನು ಕಡಿಮೆ ಮಾಡಿ, ಕೃಷಿ ಇಳುವರಿ ಹಾಗೂ ಕೃಷಿಯಿಂದ ಬರುವ ಆದಾಯದಲ್ಲಿ ಸ್ಥಿರತೆಯನ್ನು ತರಬಹುದಾಗಿದೆ.

ಈ ಹಿನ್ನೆಲೆಯಲ್ಲಿ ರೈತರು ತಮ್ಮ ಕೃಷಿ ಬೆಳೆಗಳ ಜೊತೆಗೆ ಅರಣ್ಯ ಮರಗಿಡಗಳನ್ನು ಬೆಳೆಯುವುದರಿಂದ ಕೃಷಿಯಲ್ಲಿ ಕಾಣುತ್ತಿರುವ ಹಲವಾರು ಸಮಸ್ಯೆಗಳನ್ನು ಕಡಿಮೆ ಮಾಡುವುದಲ್ಲದೆ ಕೃಷಿ ಆದಾಯದಲ್ಲಿ ಸ್ಥಿರತೆಯನ್ನು ದೀರ್ಘಾವಧಿಯಲ್ಲಿ ಕಾಣಬಹುದು.

**ಕೃಷಿಅರಣ್ಯದಲ್ಲಿ ವಿವಿಧ ಪ್ರಕಾರಗಳು:**

1) ಕೃಷಿಅರಣ್ಯವನ್ನು ವಿವಿಧ ಪ್ರಕಾರಗಳಲ್ಲಿ ಬೆಳೆಸಬಹುದು. ಇದರಲ್ಲಿ ಅನಾದಿಕಾಲದಿಂದಲೂ ಕಂಡುಬರುವ ಮುಖ್ಯ ಪದ್ಧತಿಯೆಂದರೆ ಹೆಚ್ಚು ಹೆಚ್ಚು ಮರಗಿಡಗಳನ್ನು ಜಮೀನಿನ/ಹೊಲದ ಅಂಚಿನಲ್ಲಿ, ಬದುಗಳ ಮೇಲೆ ಅಥವಾ ಬದುಗಳ ಪಕ್ಕದಲ್ಲಿ ಒಂದು ಅಥವಾ ಎರಡು ಸಾಲಿನಲ್ಲಿ ಬೆಳೆಯುವುದನ್ನು ವಿಶೇಷವಾಗಿ ಕಾಣುತ್ತೇವೆ.

ಈ ರೀತಿ ಮಾಡುವುದರಿಂದ ನಮ್ಮ ಜಮೀನಿನ ಗಡಿಯನ್ನು ಭದ್ರಪಡಿಸಿಕೊಳ್ಳುವುದು, ಗಡಿರೇಖೆಯನ್ನು ಗುರುತಿಸಿಕೊಳ್ಳುವುದು ಸುಲಭವಾಗುತ್ತದೆ. ಅಲ್ಲದೇ ಬದುಗಳ ಸಂರಕ್ಷಣೆ, ಬದುಗಳನ್ನು ಬಲಪಡಿಸಿಕೊಳ್ಳಬಹುದಾಗಿದೆ. ಇಳಿಜಾರಿಗೆ ಅಡ್ಡಲಾಗಿ ಬದುಗಳನ್ನು ನಿರ್ಮಿಸಿ ಅವುಗಳ ಪಕ್ಕದಲ್ಲಿ ಒಂದು ಸಾಲು ಮರ ಗಿಡಗಳನ್ನು ನೆಡುವುದರಿಂದ

- ➢ ಮಣ್ಣಿನ ಸವಕಳಿಯನ್ನು ತಡೆಯಬಹುದು.
- ➢ ಬಿದ್ದಂತಹ ಮಳೆಯ ನೀರನ್ನು ಭೂಮಿಯಲ್ಲಿ ಅಲ್ಲಿಯೇ ಇಂಗುವಂತೆ ಮಾಡುವುದರಿಂದ ಮಣ್ಣಿನಲ್ಲಿ ತೇವಾಂಶ ಹಾಗೂ ಅಂತರ್ಜಲ ಹೆಚ್ಚುತ್ತದೆ.
- ➢ ಮರಗಿಡಗಳಿಂದ ಬೀಳುವ/ಉದುರುವ ಎಲೆಗಳಿಂದ ಸಾವಯವ ಅಂಶ ಜಾಸ್ತಿಯಾಗಿ, ಭೂಮಿಯ ಫಲವತ್ತತೆ ಹೆಚ್ಚಾಗುತ್ತದೆ.
- ➢ ಸಾವಯವ ಅಂಶ ಹೆಚ್ಚಾಗುವುದರಿಂದ ಮಣ್ಣಿನ ತೇವಾಂಶ ಹೆಚ್ಚು ದಿನ ಇರುತ್ತದೆ.
- ➢ ಮರಗಿಡಗಳು ಪಕ್ಷಿಗಳಿಗೆ ಹಾಗೂ ಉಪಕಾರಿ ಕೀಟಗಳಾದಂತಹ (ಜೇನುನೊಣ) ಹಾಗೂ ಪರೋಪ ಜೀವಿಗಳಿಗೆ ಆಸರೆಯಾಗುವುದರಿಂದ ಕೃಷಿಯಲ್ಲಿ ಬೀಳುವ ಬಹಳಷ್ಟು ಕೀಟಗಳು, ಇತ್ಯಾದಿಗಳನ್ನು ತಿಂದು ಕೀಟಬಾದೆಗಳನ್ನು ಕಡಿಮೆ ಮಾಡುತ್ತದೆ.
- ➢ ಎರೆಹುಳುಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ.
- ➢ ಇದಲ್ಲದೆ ಮರಗಿಡಗಳನ್ನು ಕೃಷಿ ಹೊಂಡದ ಸುತ್ತಲೂ, ದಾರಿಯ ಇಕ್ಕೆಲಗಳಲ್ಲಿ ನೀರಾವರಿ ಕಾಲುವೆ ಇಕ್ಕೆಲಗಳಲ್ಲಿ ಕೃಷಿ ಯೋಗ್ಯವಲ್ಲದ ಖರಾಬು ಭೂಮಿಯಲ್ಲಿ ಕೃಷಿಕಣದ ಸುತ್ತಲೂ ಬೆಳೆಯಬಹುದು.
- ➢ ಹಾಗೂ ಇಡೀ ಬೆಳೆಯಾಗಿಯೂ ಸಹ ಬೆಳೆಯಬಹುದು.

**ಕೃಷಿಅರಣ್ಯದಲ್ಲಿ ಸೂಕ್ತ ಮರಗಿಡಗಳ ಆಯ್ಕೆ:**

ಕೃಷಿಅರಣ್ಯ ಮಾಡುವ ರೈತರು ಸೂಕ್ತ ಅರಣ್ಯ ಮರಗಿಡಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಕೃಷಿಯ ಜೊತೆಗೆ ಮರಗಿಡಗಳು ಬೆಳೆಯಬೇಕಾಗಿರುವುದರಿಂದ ನೇರವಾಗಿ ಎತ್ತರಕ್ಕೆ ಬೆಳೆಯುವ, ಕಡಿಮೆ ರೆಂಬೆ, ಕೊಂಬೆಗಳಿಂದ ಕೂಡಿದ, ವೇಗವಾಗಿ ಬೆಳೆಯುವ, ಬಹುಪಯೋಗಿ ಮರಗಿಡಗಳು ಈ ಪದ್ಧತಿಗೆ ಹೆಚ್ಚು ಸೂಕ್ತ.

ಮರಗಿಡಗಳ ಆಯ್ಕೆ ಅತ್ಯಂತ ಪ್ರಮುಖ ವಿಚಾರವಾಗಿದ್ದು, ಇದು ಆ ಪ್ರದೇಶದ ಹವಾಗುಣ, ಮಳೆಯ ಪ್ರಮಾಣ ಮಣ್ಣಿನ ವಿಧ, ಯಾವ ಕೃಷಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ? ರೈತರ ಆಹಾರದ ಪದ್ಧತಿ, ಮಾರುಕಟ್ಟೆ ಇತ್ಯಾದಿ ಅಂಶಗಳನ್ನು ಅವಲಂಭಿಸಿದೆ.

ಸಾಮಾನ್ಯವಾಗಿ ಬಹುತೇಕ ಮರಗಿಡಗಳು ದೀರ್ಘಕಾಲದ ನಂತರ ಕಟಾವಿಗೆ ಬರುವ ಬಹುವಾರ್ಷಿಕ ಮರಗಳಾಗಿರುವುದರಿಂದ ಸಣ್ಣ ಹಾಗೂ ಅತಿ ಸಣ್ಣ ರೈತರು ಇಂತಹ ಮರಗಿಡಗಳ ಆಯ್ಕೆಯಲ್ಲಿ ಎಚ್ಚರವಹಿಸುವುದು ಸೂಕ್ತ. ಮರಗಿಡಗಳನ್ನು ಅವುಗಳು ಕಟಾವಿಗೆ ಬರುವ ಅವಧಿಯನ್ನು ಗಮನಿಸಿ, ಅಲ್ಪಾವಧಿ, ಮಧ್ಯಮಾವಧಿ ಹಾಗೂ ಅತಿ ದೀರ್ಘಾವಧಿ ಮರಗಿಡಗಳೆಂದು ವಿಂಗಡಿಸಹುದು.

ಉದಾಹರಣೆಗೆ: ಬಿದಿರು, ಸರ್ವೆ (ಗಾಳಿ ಮರ), ಹಿಪ್ಪು ನೇರಳೆ, ಗೊಬ್ಬರ ಗಿಡ, ಸೂಬಾಬುಲ್, ಔಷಧಿ ಗಿಡ ಮೂಲಿಕೆಗಳು ಕೇವಲ ಮೂರರಿಂದ ಐದು ವರ್ಷಗಳಲ್ಲೆ ಕಟಾವಿಗೆ ಬರುವುದರಿಂದ ಇವುಗಳನ್ನು ಅಲ್ಪಾವಧಿ ಮರಗಿಡಗಳೆಂದು ಕರೆಯಬಹುದು.

ಅದೇ ರೀತಿ ಅತಿ ವೇಗವಾಗಿ ಹಾಗೂ ನೇರವಾಗಿ ಬೆಳೆಯುವ ಸಿಲ್ವರ್‌ಓಕ್, ಹೆಬ್ಬೇವು, ಸರ್ವೆ, ಪಾರಿವಾಣ, ನೀಲಗಿರಿ, ಸುಬಾಬುಲ್ ಮರಗಳು ಅಂದಾಜು 8 ರಿಂದ 12 ವರ್ಷಗಳಲ್ಲಿ ಕಟಾವಿಗೆ ಬರುತ್ತವೆ.

ಇದು ಅಲ್ಲದೆ ಅತ್ಯಂತ ಬೆಲೆ ಬಾಳುವ ಮರಗಳಾದ ಶ್ರೀಗಂಧ, ರಕ್ತಚಂದನ, ಸಾಗುವಾನಿ, ಮಹಾಗನಿ, ಬೇವು, ಬೇಟೆ, ಹೊನ್ನೆ ಇತ್ಯಾದಿ ಮರಗಳನ್ನು ದೀರ್ಘಾವಧಿಯಲ್ಲಿ ಬೆಳಸಬಹುದು. ಈ ಮರಗಳನ್ನು 20 ವರ್ಷಗಳ ನಂತರ 30 ವರ್ಷಗಳವರೆಗೆ ಬೆಳೆಸಿ ಅವಶ್ಯಕತೆ ಬಂದಾಗ

ಕಟಾವು ಮಾಡಬಹುದು.

ಮುಂದುವರೆದು, ಅತಿ ಮುಖ್ಯವಾಗಿ ಬಹುಪಯೋಗಿ ಹಣ್ಣಿನ ಮರಗಳಾದ ಮಾವು, ಹಲಸು, ನೇರಳೆ, ಬೇಲ, ನಲ್ಲಿ, ಹುಣಸೆ, ಬೋರೆ, ಉಪ್ಪಾಗೆ, ಪುರ್ನಪುಳಿ ಇತ್ಯಾದಿ ಹಣ್ಣಿನ ಗಿಡಮರಗಳನ್ನು ದೀರ್ಘಾವಧಿಯಲ್ಲಿ ಬೆಳೆಯಬಹುದು ಹಾಗೂ 5–6 ವರ್ಷಗಳ ನಂತರ ನಿರಂತರವಾಗಿ ಹಣ್ಣಿನ ಇಳುವರಿ ಪಡೆಯಬಹುದು.

ಅದೇ ರೀತಿ ಜೈವಿಕ ಇಂಧನ ತಳಿಗಳಾದ ಬೇವು, ಹೊಂಗೆ, ಸೀಮರೂಬ, ಹಿಪ್ಪೆ, ಕಾಡುಹರಳು, ಇತ್ಯಾದಿ ಮರಗಿಡಗಳನ್ನು ಹವಾಮಾನ ಹಾಗೂ ಮಣ್ಣಿನ ಗುಣಧರ್ಮಕ್ಕೆ ತಕ್ಕಂತೆ ಆಯ್ಕೆ ಮಾಡಿ ನೆಡಬಹುದಾಗಿರುತ್ತದೆ.

**ಮರಗಿಡಗಳ ವೈಶಿಷ್ಟ್ಯಗಳು:**

1. ನಮ್ಮ ದೇಶದಲ್ಲಿ ಸುಮಾರು 600 ಕ್ಕೂ ಹೆಚ್ಚು ವಿವಿಧ ಜಾತಿಯ ಮರಗಿಡಗಳಿದ್ದು, ಯಾವುದೇ ರೀತಿಯ ಹವಾಗುಣ, ಮಣ್ಣಿನ ವಿಧ, ಹಾಗೂ ಕೃಷಿಗೆ ಯೋಗ್ಯವಲ್ಲದ ಬರಡು ಭೂಮಿಗಳಲ್ಲಿ ಬೆಳೆಯುವ ಗುಣವಿರುವ ಮರಗಳಿದ್ದು ಬಹು ಆಯ್ಕೆಗಳಿವೆ.
2. ಬಹಳಷ್ಟು ಅರಣ್ಯ ಮರಗಿಡಗಳು ಬರಸಹಿಷ್ಣುತೆ ಗುಣ ಹೊಂದಿದ್ದು ಕೇವಲ ಮಳೆ ಆಶ್ರಯದಲ್ಲಿಯೇ ಬೆಳೆಯಬಹುದು. ಹೆಚ್ಚೆಂದರೆ ಪ್ರಾರಂಭದ 1–2 ವರ್ಷಗಳ ಬೇಸಿಗೆಯಲ್ಲಿ ನೀರುಣಿಸಿದರೆ ಸಾಕಾಗುತ್ತದೆ.
3. ಮರಗಿಡಗಳು ದೊಡ್ಡದಾಗಿ ಬೆಳೆದ ನಂತರ ಅತಿವೃಷ್ಟಿಯಾಗಲೀ ಅಥವಾ ಬರವಾಗಲೀ ಅವುಗಳ ಮೇಲೆ ಅಂತಹ ಹೆಚ್ಚಿನ ದುಷ್ಪರಿಣಾಮ ಬೀರುವುದಿಲ್ಲ.
4. ಬಹುತೇಕ ಬೆಳೆಗಳಿಗೆ ಕೀಟ ನಾಶಕಗಳನ್ನು ಸಿಂಪಡಿಸುವ ಅವಶ್ಯಕತೆ ಇರುವುದಿಲ್ಲ.
5. ರಸಗೊಬ್ಬರಗಳ ಅವಶ್ಯಕತೆ ಇರುವುದಿಲ್ಲ. ಅಥವಾ ಅತಿ ಕಡಿಮೆ ಪ್ರಮಾಣದಲ್ಲಿ ಪ್ರಾರಂಭಿಕ ಹಂತದಲ್ಲಿ ಮಾತ್ರ ನೀಡಬಹುದು.
6. ಕೃಷಿಗೆ ಯೋಗ್ಯವಲ್ಲದ, ಕೃಷಿಗೆ ಲಾಭದಾಯಕವಲ್ಲದ ಭೂಮಿಯಲ್ಲಿಯೂ ವಿವಿಧ ದೀರ್ಘಾವಧಿ ಗಿಡಗಳನ್ನು ಬೆಳೆಯಬಹುದು.
7. ಕೃಷಿ ಕೂಲಿಕಾರ್ಮಿಕರ ಸಮಸ್ಯೆ ಇರುವ ಕಡೆ ಮರಕೃಷಿ/ಅರಣ್ಯ ಕೃಷಿಯನ್ನು ಉತ್ತೇಜಿಸಬಹುದು.
8. ದೀರ್ಘಾವಧಿಯಲ್ಲಿ ನಿರ್ವಹಣಾ ವೆಚ್ಚ ಅತಿ ಕಡಿಮೆ.
9. ಭೂ ಮಾಲೀಕರು ನಿರಂತರವಾಗಿ ಸ್ಥಳದಲ್ಲಿ ಉಸ್ತುವಾರಿ ಮಾಡುವ ಅವಶ್ಯಕತೆ ಇರುವುದಿಲ್ಲ.
10. ಬಹು ಆಯ್ಕೆಗಳಿಗೆ ಸೂಕ್ತವಿದ್ದು, ಸಮಗ್ರ ಕೃಷಿ, ಸಾವಯವ ಕೃಷಿ, ಸಹಜ ಕೃಷಿ, ಮಿಶ್ರ ಬೇಸಾಯ, ಸ್ವಾವಲಂಬಿ ಕೃಷಿ ಪದ್ಧತಿಗಳಿಗೆ ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಬಹುದು.
11. ಪರಿಸರ ಸ್ನೇಹಿ, ಪರಿಸರ ಸಂರಕ್ಷಣೆಯಲ್ಲಿ ಅರಣ್ಯ ಹೊದಿಕೆ ಹೆಚ್ಚಿಸುವಲ್ಲಿ ಪರಿಣಾಮಕಾರಿ ಹೆಜ್ಜೆ.
12. ನಿಶ್ಚಿತ ಹಾಗೂ ಸ್ಥಿರ ಆದಾಯವನ್ನು ದೀರ್ಘಾವಧಿಯಲ್ಲಿ ನಿರೀಕ್ಷಿಸಬಹುದು. ಸಾಮಾನ್ಯವಾಗಿ ಅರಣ್ಯ ಉತ್ಪನ್ನಗಳಾದ ಉರುವಲು ಸೌದೆ, ಪಲ್ಪ್‌ವುಡ್, ಮೆದುಮರ, ನಾಟಾಗಳ ಬೆಳೆಗಳು ಕಳೆದ ಅನೇಕ ವರ್ಷಗಳಿಂದ ಬೆಲೆಗಳು ಏರುಗತಿಯಲ್ಲಿವೆ.
13. ಮಾರುಕಟ್ಟೆ ನಿಯಂತ್ರಣ ಮಾಡಬಹುದಾಗಿದ್ದು ಬೇಕೆಂದಾಗ ಕಟಾವು ಮಾಡುವುದರಿಂದ ಮಾರುಕಟ್ಟೆ ನಿಯಂತ್ರಣ ಸಾಧ್ಯ.
14. ಬಹುಪಯೋಗಿ ಮರಗಿಡಗಳು ಉರುವಲು ಸೌದೆ, ಮೆದುಮರ, ಕೃಷಿ ಉಪಕರಣಗಳಿಗೆ ಮರ, ಮೇವು, ಹಸಿರೆಲೆ ಗೊಬ್ಬರ, ಹಣ್ಣು, ಔಷಧಿ, ಜೈವಿಕ ಇಂಧನ, ಅಂಟು, ರಾಳ ಇತ್ಯಾದಿ ಪಡೆಯಬಹುದು.
15. ಮಣ್ಣಿನ ಸಂರಕ್ಷಣೆ, ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳುವುದು, ಅಂತರ್ಜಲ ವೃದ್ಧಿ, ಮಣ್ಣಿನ ತೇವಾಂಶ ಹೆಚ್ಚಿಸುವುದು. ಮಣ್ಣಿನ ಆರೋಗ್ಯ ಕಾಪಾಡುವುದು ಕೃಷಿಅರಣ್ಯದಿಂದ ಸಾಧ್ಯವಾಗುತ್ತದೆ.
16. ಗುಡಿಕೈಗಾರಿಕೆ ಉತ್ತೇಜಿಸುತ್ತದೆ.
17. ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಜನೆ, ಉಪ ಕಸುಬು ಮಾಡುವ ರೈತರಿಗೆ ಪರಿಣಾಮಕಾರಿಯಾಗಿ ಕೃಷಿಅರಣ್ಯ ಉತ್ತೇಜಿಸಬಹುದು.
18. ಸಮುದಾಯಕ್ಕೆ ಸೇರಿದ ಜಮೀನುಗಳಲ್ಲಿ "ಪಾಲಿಸಿದರೆ ಪಾಲು" (CARE AND SHARE) ಪದ್ಧತಿ ಅಳವಡಿಸಿ ಭೂರಹಿತ ಕೃಷಿ ಕೂಲಿಕಾರ್ಮಿಕರ ಸ್ವಸಹಾಯ ಗುಂಪುಗಳ ಭಾಗವಹಿಸುವಿಕೆ ಮೂಲಕ ಗ್ರಾಮೀಣ ಪ್ರದೇಶದ ಜನರ ಆದಾಯ ಹೆಚ್ಚಿಸಬಹುದು.



ರೈತರಾದ ನಾಗರಾಜ, ಮಾಡಾಳು ಇವರು ಮಹಾಗನಿ ಮತ್ತು ಇನ್ನಿತರೆ ಹಣ್ಣು ನೀಡುವ ನೆಡುತೋಪಿನಲ್ಲಿ (ಸ್ಥಳ ಮಾಡಾಳು ಗ್ರಾಮ, ಅರಸಿಕೆರೆ ತಾಲೂಕು)

## ಗಿರಿ ನೀಲ – ಮರ ಹಸಿರು

"ಓ ಗೆಳೆಯ ನಿಲ್ಲು!
ಬೀರದಿರು ನಿನ್ನ
ಕೊಡಲಿಯ ನನ್ನೆಡೆಗೆ!
ನಿನ್ನ ಕೊಡಲಿಯೇಟಿಗೆ
ಭಯವಿಲ್ಲವೆನಗೆ ಆದರೆ ನೀ
ಕಡಿಯಲೇಕೆ ಬಂದಿರುವೆ
ತಿಳಿಸುವೆಯ?"
ಮನುಜ ನುಡಿದ
"ನೀ ವಿಷ ವೃಕ್ಷ ಎನ್ನುವರು
ನೀ ನೀರು ಕುಡಿಯುವ
ರಕ್ಕಸ ಎನ್ನುವರು
ನಿನ್ನ ನೆರಳಲ್ಲಿ ಬೆಳೆಯವು
ಬೇರೆ ಸಸಿಗಳು
ನೀ ಪರಿಸರ ವಿರೋಧಿ
ನಿನ್ನ ಬಳಿ ಸುಳಿಯವು ಹಕ್ಕಿಗಳು
ಎಲ್ಲಕ್ಕಿಂತ ಹೆಚ್ಚಾಗಿ ನೀ ಪರಕೀಯ !"
ನುಡಿಯಿತು ನೀಲಗಿರಿ
"ಇವು ಬರೀ ಸತ್ಯವನರಿಯಲು
ಒಪ್ಪದ ದೋಷಾರೋಪಗಳು!
ನಿನ್ನ ಅನುಮಾನಗಳಿಗೆ
ಇದೆ ಎನ್ನ ಬಳಿ ಉತ್ತರ
ಆದರೆ ಕೇಳುವ ತಾಳ್ಮೆ ನಿನಗಿದಯೇ?
ಅಲ್ಲಿಯವರೆಗೆ ಮುಟ್ಟದಿರು
ಕೊಡಲಿಯ !
ಬಳಸದಿರು ಗರಗಸವ!"
"ನೀಲಗಿರಿ ಬೇಡವೇ ಬೇಡ"*
ಎನ್ನುತ್ತಿರುವೆ!
"ಆಗಸದ ಬಣ್ಣವ ತಳೆದು
ಉದಕ ಮಂಡಲದ ಗಿರಿಗಳಲಿ ಹಬ್ಬಿ
ಕುರಂಜಿಗಳೊಡನೆ ಬೆಳೆದು
ಮಂಜಿನೊಡನೆ ನಾನೂ
ನೀಲಬೆಟ್ಟಗಳಲಿ ಸೇರಿ ಹೋಗಿ
ಬೂದ ನೀಲವ ಮೈಗೆ ಮೆತ್ತಿ
ಬೆಳೆದು ಆದೆ ನಾ ನೀಲಗಿರಿ!"
ಸದ್ಯ ನೀವುಗಳು ಬಳ್ಳಾರಿ
ಗುಡ್ಡಗಳ ಬಗೆದು ನೆಲಸಮ ಮಾಡಿ ಅಗೆದ
ಮಣ್ಣಿನ ಕೆಂಪು ಗಿರಿ ಮಾಡಿ ಆ ಹೆಸರ
ನನಗಿಡಲಿಲ್ಲವಲ್ಲ ನನ್ನಪುಣ್ಯ!
"ಬೆಳ್ಳಿ ಮೋಡಗಳಾಚೆಗಿನ
ನೀಲಾಗಸದೆಡೆಗೆ ದಿಟ್ಟಿಸುತ
ರವಿ ಕಿರಣಗಳ ಹೀರಿ
ಅತ್ಯಲ್ಪ ಕಾಲದಿ
ದ್ರವ್ಯರಾಶಿಯ ಸೃಷ್ಟಿಸುತ
ಉಸಿರ ನೀಡುತ್ತ
ತಂಪು ಹರಡುತ್ತ
ತಂಗಾಳಿಯಲಿ ತೂಗಾಡುತ್ತ
ಗಿರಿಯೆತ್ತರಕೆ ಬೆಳೆದವನು ನಾನು! "
"ಆಸ್ಟ್ರೇಲಿಯಾ ಮೂಲದ ನನಗೆ
ಪ್ರೀತಿಯಿಂದ ಬರಮಾಡಿ
ನಿಮ್ಮವನಾಗಿಮಾಡಿ
ಎಂತಹ ಸುಂದರ ಹೆಸರು
ನೀಡಿದಿರಿ !
ಗಗನದ ನೀಲಿ
ಗಿರಿಯ ಗಹನತೆಯ
ಹೋಲಿಕೆ ಮಾಡಿ
ನೀವಿಟ್ಟ ಹೆಸರಲ್ಲವೇ?
ನೀಲಗಿರಿ!
ಅದಕ್ಕೆ ತಕ್ಕಂತೆ ನಾ ಬದುಕಲಿಲ್ಲವೇ?"

## ವರ್ಣನಾತೀತ

ವೈಯಾರಿ ಹಕ್ಕಿ ಕೈಯಾರೆ
ಬಣ್ಣದ ಸೀರೆಯನುಟ್ಟು
ನಯವಾದ ಪುಕ್ಕದ
ನೆರಿಗೆಯ ಕೆಳಗಿಳಿಬಿಟ್ಟು
ಬಣ್ಣದ ರೆಕ್ಕೆಯ ಕುಪ್ಪಸ
ತೊಟ್ಟು ತೋಳಿನವರೆಗೆ
ಗರಿಗಳಬಿಟ್ಟು ನುಣ್ಣನೆ ಮುಖದಲಿ
ಸಣ್ಣನೆ ಕಣ್ಗಳು ಬಣ್ಣದ ಮಧ್ಯೆ
ನೋಡುತಲಿತ್ತು ಆಗಸದತ್ತ
ಕೊಕ್ಕನು ಎತ್ತಿ ಕುಳಿತಿದೆ ಮರದಲಿ
ಸೌಂದರ್ಯ ಹೊತ್ತು ಕಲ್ಪನೆ ಮೀರಿದ
ವರ್ಣನೆಗಾಗಿ ಸ್ವರ್ಣ ಕನ್ನಡದ
ಅಕ್ಷರಮಾಲೆಯ ಪುಸ್ತಕ ಹೊತ್ತು
ಕವಿತೆಯ ಬರೆಯುವೆ ಸುಂದರ
ಪದಗಳ ವರ್ಣನೆ ಕೊಟ್ಟು

**– ಡಾ. ಎಸ್.ಹಟ್ಟಪ್ಪ ಮುಂಗುಸವಳ್ಳಿ**



## ಪರಿಸರ

ಬಾನಿನ ಎತ್ತರ ಕಾನನವಿರಲಿ
ಪರಿಸರ ಕಾಳಜಿ ಮಾನವಗಿರಲಿ
ನೀಲಿಯ ಬಾನಲಿ ಮೋಡಗಳಿರಲಿ
ನೇಸರ ಮಳೆಯನು ಸುರಿಸುತಲಿರಲಿ
ಸಸಿಗಳ ನೆಡುವ ಅವಸರವಿರಲಿ
ಖಗಮೃಗ ಕಲರವ ಪ್ರಕೃಯಲಿರಲಿ
ನನ್ನೀ ದೇಹವು ಅಳಿಯುವವರೆಗು
ಪುಣ್ಯವ ಮಾಡಿದ ಕಣ್ಣುಗಳೆರಡು
ಕಣ್ಮನ ಸೆಳೆಯುವ ಕಾಡಿನ ದೃಶ್ಯವ
ಧನ್ಯತ ಭಾವದಿ ನೋಡುತಲಿರಲಿ

**– ಡಾ. ಎಸ್.ಹಟ್ಟಪ್ಪ ಮುಂಗುಸವಳ್ಳಿ**



## ಏನೆಂದೆ ನಾ ವಿಷವೃಕ್ಷ!

"ಕೈಗಾರಿಕೆ ಮೋಟಾರು
ವಾಹನಗಳಿಂದ ನೀವು
ಬಿಡುಗಡೆಗೊಳಿಸಿದ ಇಂಗಾಲವ
ಹೀರಿ ಆಗಲಿಲ್ಲವೇ
ನಾ ನೀಲಕಂಠ!
ನಾ ಬಿಡುಗಡೆ ಮಾಡಿದ
ಪ್ರಾಣವಾಯುವ ನೀವೆಲ್ಲಾ
ಸೇವಿಸಿಲ್ಲವೇನು?
ನಾ ವಿಷವೃಕ್ಷ ಆಗಿದ್ದಲ್ಲಿ
ನೀವು ಬದುಕುಳಿಯುತಿದ್ದರೇನು? "
ಇಂಗಾಲ ಹೀರಿ ಸ್ಥಿರೀಕರಿಸಿ
ಹವಾಮಾನ ಬದಲಾವಣೆಗೆ
ಉಪಶಮನ ನೀಡಿಲ್ಲವೇನು?
ನಾನು ಈ ಜಾಗತಿಕ ಸಮಸ್ಯೆಯ
ಪರಿಹಾರದ ಭಾಗವಲ್ಲವೇನು?
ನನ್ನ ಎಲೆಗಳ ಹಿಂಡಿ
ತೆಗೆದ ತೈಲವ
ಶೀತವಾದಾಗ ವಾಸನೆಯ ಹೀರಿ
ಮೂಗಿಗೆ ಲೇಪಿಸಿ
ಸ್ನಾಯುಗಳಿಗೆ ಹಚ್ಚಿ ನೋವು
ಶಮನಗೊಳಿಸಿಕೊಳ್ಳಲಿಲ್ಲವೇನು?
"ನನ್ನ ಸೌದೆಯ ಬಳಸಿ
ನೀವು ಅಡಿಗೆಗೆ ನೀರ ಕಾಯಿಸಲು
ಅಷ್ಟೇ ಏಕೆ ತಂಬಾಕು
ಹದಗೊಳಿಸಲಿಲ್ಲವೇನು?
ತಂಬಾಕು ವಿಷವಲ್ಲವೇನು?
ಹೀಗೆ ಹದಗೊಳಿಸಲು ಕಡಿದ
ನನ್ನ ಸಾವಿರಾರು ಮರಗಳು
ನೈಸರ್ಗಿಕ ಕಾಡಿನ ಸಹಸ್ರ
ಸಹಸ್ರ ಸಹಸ್ರ ಗೆಳೆಯರ ಉಳಿಸಲಿಲ್ಲವೇನು?"

### "ಇಲ್ಲಾ ನೀ ವಿದೇಶಿ ಅಂದೆಯಾ"

ಅಯ್ಯೋ ಹುಚ್ಚಪ್ಪ
ಒಂದಾನೊಂದು ಕಾಲದಿ
ಈ ಭೂಮಿ ಪಾಂಜಿಯ
ಎಂಬ ಒಂದೇ ಭಾಗ!
ನಂತರ ಅದು ಒಡೆದು
ಖಂಡಗಳಾಗಿ ಬೇರೆಯಾಗಿ
ನಮ್ಮ ಭರತಖಂಡ ಪೂರ್ವ
ಆಫ್ರಿಕಾದಭಾಗವಾಗಿದ್ದುದ
ನೀ ಮರೆತೆಯೇನು!
ಅಲ್ಲಿರುವ ಸೋದರ ವಂಶಿಗರು
ಸಹ್ಯಾದ್ರಿಯಲೂ ಬೆಳೆಯುತ್ತಿಲ್ಲವೇನು? "

"ನೀವು ತಿನ್ನುವ
ಟೊಮೆಟೊ ಆಲೂ
ಕುಂಬಳ ಅವರೆ ಹಸಿಮೆಣಸು
ಎಲ್ಲಿಂದಲೋ ಬಂದು
ನಿಮ್ಮ ನೆಲದಲಿ ನಿಂದು
ನಿಮ್ಮವೇ ಆಗಿಲ್ಲವೇನು?
ಬಿಜಿಎಲ್ ಸ್ವಾಮಿಯವರ
'ನಮ್ಮ ಹೊಟ್ಟೆ ಯಲಿ
ದಕ್ಷಿಣ ಅಮೇರಿಕ ' ಕೃತಿ
ಓದು!
ತಿಳಿದೀತು ಸ್ವದೇಶಿ
ವಿದೇಶಿ ಯಾವುದು?
ಇರುವದೊಂದೇ ಭೂಮಿ
ಎಂದು! "

**ಡಾ.ಕೆ.ಎಚ್. ವಿನಯ್‌ಕುಮಾರ್**

ಭಾಅಸೇ(ನಿ)



# ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ.)

## ಆಡಳಿತ ಮಂಡಳಿ



ಶ್ರೀ ಅಜಯ್ ಮಿಶ್ರ
ಅಧ್ಯಕ್ಷರು
ಮೊ: 94498 63876



ಡಾ. ಎಸ್.ಸಿ.ವಿ. ರೆಡ್ಡಿ
ಸಹ ಅಧ್ಯಕ್ಷರು
ಮೊ: 98806 46274



ಡಾ. ಎಸ್. ರಾಜೇಂದ್ರ ಪ್ರಸಾದ್
ಉಪಾಧ್ಯಕ್ಷರು
ಮೊ: 94528 83308



ಶ್ರೀ ಹೆಚ್.ಜಿ. ಶಿವಾನಂದಮೂರ್ತಿ
ಕಾರ್ಯದರ್ಶಿ
ಮೊ: 94481 26246



ಶ್ರೀ ಎ. ಅಶ್ವಥಯ್ಯ
ಜಂಟಿ ಕಾರ್ಯದರ್ಶಿ
ಮೊ: 94481 85009



ಶ್ರೀ ಗುರುಮೂರ್ತಿ
ಖಜಾಂಚಿ
ಮೊ: 99457 54650



ಡಾ. ಎ.ಬಿ. ಪಾಟೀಲ
ಸದಸ್ಯರು
ಮೊ: 97401 82990



ಶ್ರೀ ಸಿದ್ದಲಿಂಗಪ್ಪ
ಸದಸ್ಯರು
ಮೊ: 99005 39499



ಶ್ರೀ ಎಂ.ಸಿ. ರಂಗಸ್ವಾಮಿ
ಸದಸ್ಯರು
ಮೊ: 99801 26555



ಶ್ರೀ ಎನ್. ಶಿವರಾಜು
ಸದಸ್ಯರು
ಮೊ: 94826 47448




ಶ್ರೀ ಆರ್. ಆಂಜನೇಯ ರೆಡ್ಡಿ
ಸದಸ್ಯರು
ಮೊ: 93438 70009



ಶ್ರೀ ಮಲ್ಲೇಶ್ ಲಿಂಗಾಚಾರ್
ಸದಸ್ಯರು
ಮೊ: 78999 10288



ಶ್ರೀ ಬಿ.ಪಿ. ಹನುಮಂತರಾಯಪ್ಪ
ಸದಸ್ಯರು
ಮೊ: 94494 56824














ವಿಳಾಸ: ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ), ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು –560003
ದೂ: 080 23566126 Email: iaftbangalore@gmail.com, website: www.iaft.co.in